ಕೇರಳ ಪಾಠಾವಳಿ

# ಕನ್ನಡ

## ಮೂಲ ಪಠ್ಯ

# KERALA READER
# KANNADA
## BASIC TEXT

## ತರಗತಿ

## VI

ಕೇರಳ ಸರಕಾರ
ಸಾರ್ವಜನಿಕ ಶಿಕ್ಷಣ ಇಲಾಖೆ

ತಯಾರಿಸಿದವರು
ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಸಮಿತಿ (SCERT) ಕೇರಳ
2016

## ರಾಷ್ಟ್ರಗೀತೆ

ಜನಗಣ ಮನ ಅಧಿನಾಯಕ ಜಯಹೇ
ಭಾರತ ಭಾಗ್ಯ ವಿಧಾತಾ
ಪಂಜಾಬ ಸಿಂಧು ಗುಜರಾತ ಮರಾಠಾ
ದ್ರಾವಿಡ ಉತ್ಕಲ ವಂಗಾ
ವಿಂಧ್ಯ ಹಿಮಾಚಲ ಯಮುನಾ ಗಂಗಾ
ಉಚ್ಛಲ ಜಲಧಿತರಂಗಾ
ತವಶುಭ ನಾಮೇ ಜಾಗೇ
ತವಶುಭ ಆಶಿಷ ಮಾಗೇ
ಗಾಹೇ ತವ ಜಯ ಗಾಥಾ
ಜನಗಣ ಮಂಗಲದಾಯಕ ಜಯಹೇ
ಭಾರತ ಭಾಗ್ಯ ವಿಧಾತಾ
ಜಯಹೇ ಜಯಹೇ ಜಯಹೇ
ಜಯ ಜಯ ಜಯ ಜಯಹೇ

## ಪ್ರತಿಜ್ಞೆ

ಭಾರತವು ನನ್ನ ದೇಶ. ಭಾರತೀಯರೆಲ್ಲರೂ ನನ್ನ ಸಹೋದರ, ಸಹೋದರಿಯರು.

ನಾನು ನನ್ನ ದೇಶವನ್ನು ಪ್ರೀತಿಸುತ್ತೇನೆ. ಅದರ ಸಂಪನ್ನ ಹಾಗೂ ವೈವಿಧ್ಯಪೂರ್ಣವಾದ ಪರಂಪರೆಗೆ ನಾನು ಹೆಮ್ಮೆಪಡುತ್ತೇನೆ.

ನಾನು ನನ್ನ ತಂದೆ, ತಾಯಿ ಮತ್ತು ಗುರುಹಿರಿಯರನ್ನು ಗೌರವಿಸುತ್ತೇನೆ ಮತ್ತು ಎಲ್ಲರೊಡನೆ ಸೌಜನ್ಯದಿಂದ ವರ್ತಿಸುತ್ತೇನೆ.

ನಾನು ನನ್ನ ದೇಶ ಮತ್ತು ದೇಶದ ಜನರಿಗೆ ನನ್ನ ಶ್ರದ್ಧೆಯನ್ನು ಮುಡಿಪಾಗಿಡುತ್ತೇನೆ. ಅವರ ಕ್ಷೇಮ ಮತ್ತು ಸಮೃದ್ಧಿಯಲ್ಲೇ ನನ್ನ ಆನಂದವಿದೆ.

*Prepared by :*

**State Council of Educational Research and Training (SCERT)**
Poojappura, Thiruvananthapuram 695012, Kerala
*Website* : www.scertkerala.gov.in
*e-mail* : scertkerala@gmail.com
Phone : 0471 - 2341883, Fax : 0471 - 2341869
First Edition : 2014, Reprint: 2016
Typesetting : SCERT
Lay out : SCERT
Cover design : SCERT
Printed at : KBPS, Kakkanad, Kochi-30
© Department of Education, Government of Kerala

ಪ್ರೀತಿಯ ವಿದ್ಯಾರ್ಥಿಗಳೇ,

ಭಾಷೆಯೆಂದರೆ ಮಾತೆಯ ಮಮತೆಯ ಹಾಗೆ. ನಯ ವಿನಯದಿಂದ ಕೂಡಿದ ಮಾತು ಎಲ್ಲರನ್ನು ಸೆಳೆಯುತ್ತದೆ. ನಮ್ಮ ಮಾತು ಕೃತಿಗಳು ನಮ್ಮ ವ್ಯಕ್ತಿತ್ವ ಚಿಂತನೆಗಳನ್ನು ಹೊರಗೆಡಹುತ್ತವೆ. ಕನ್ನಡ ನುಡಿಯು ನಮ್ಮೆಲ್ಲರ ಬಾಂಧವ್ಯವನ್ನು ಬೆಸೆಯುತ್ತದೆ. ಸಂಸ್ಕೃತಿಯ ಕೈಗನ್ನಡಿಯಾಗಿರುವ ನುಡಿಯ ಹಿರಿಮೆಯನ್ನು ನೀವೆಲ್ಲರೂ ಅರಿತುಕೊಳ್ಳಬೇಕಾಗಿದೆ. ಅದಕ್ಕಾಗಿ ನಿಮ್ಮ ಮನಸೂರೆಗೊಳಿಸುವಂತಹ ಕತೆ, ಕವಿತೆ, ನಾಟಕ, ಇತ್ಯಾದಿ ಸಾಹಿತ್ಯ ಪ್ರಕಾರಗಳನ್ನು ಈ ಪಠ್ಯಪುಸ್ತಕದಲ್ಲಿ ಕೊಡಲಾಗಿದೆ. ನಿಮ್ಮ ಆಶಯಗಳನ್ನೂ, ಭಾವನೆಗಳನ್ನೂ, ಅನುಭವಗಳನ್ನೂ ಹಂಚಿಕೊಳ್ಳಲು ಮತ್ತು ಪ್ರಕಟಿಸಲು ಈ ಪಾಠಪುಸ್ತಕವು ಸಹಕಾರಿಯಾಗಲಿ ಎಂದು ಆಶಿಸುತ್ತೇನೆ. ಇವುಗಳಲ್ಲಿರುವ ಉತ್ತಮ ಮೌಲ್ಯಗಳು ಚಿಂತನೆಗಳು ನಿಮ್ಮ ಬದುಕಿಗೆ ದಾರಿದೀಪವಾಗಲಿ. ಕನ್ನಡ ಕುಸುಮದ ಕಂಪನ್ನು ಪಸರಿಸಲು ನಾವೆಲ್ಲ ಒಂದಾಗಿ ಶ್ರಮಿಸೋಣ.

ಪ್ರೀತಿಪೂರ್ವಕ ಹಾರೈಕೆಗಳೊಂದಿಗೆ,

**ಡಾ. ಪಿ.ಎ. ಫಾತಿಮ**
ನಿರ್ದೇಶಕರು
ಎಸ್.ಸಿ.ಇ.ಆರ್.ಟಿ., ಕೇರಳ

## TEXTBOOK DEVELOPMENT TEAM

### STANDARD VI

# KANNADA - BT

**Participants**

Asha Kumari K., SGKHS Kudlu
Kunhirama, AKMMAUPS Paika
Padmanayana, SVVAUPS Kodlamogaru
Radhakrishna Bhat, SNHS Perla
Sathyanarayana Sharma, GSBS Kumbla
Shekhara Shetty, HAUPS Chippar
Shrinivasa K.H., Dharmathadka AUPS
Subrahmanya Bhat K., GSBS Soorambail
Udaya Kumar M., GHS Adoor
Veena K., GHSS Kundamkuzhi

**Experts**

Dr. Srikrishna Bhat P., Professor (Rtd), Govt. College, Kasaragod.
Dr. Rathnakara Mallamoole, Asst. Professor, Govt. College Kasaragod
Shridhara N., Asst. Professor, Govt. College, Kasaragod
Shivashankar, Asst. Professor, Govt.College, Manjeshwar.

**Artists**

Balamadhurakanana, Madhurakanana, Bela.
Shyam Shashi, GHSS Kakkat.

**Academic Co-ordinator**

Dr. Faisal Mavulladathil, Research Officer SCERT, Thiruvananthapuram.

---


ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಸಮಿತಿ (SCERT) ಕೇರಳ
ವಿದ್ಯಾಭವನ, ಪೂಜಪ್ಪುರ, ತಿರುವನಂತಪುರಂ 695012

# ಅನುಕ್ರಮಣಿಕೆ


| | | | |
|---|---|---|---|
| **1.** | **ವಸುಧೆಯ ವೈಭವ** | | **7** |
| | ಮರುಹುಟ್ಟು | (ಕಥೆ) | |
| | ನೇಸರು | (ಕವಿತೆ) | |
| | ಪ್ರವಾಸಿಗರ ಸ್ವರ್ಗ–ವಯನಾಡು | (ಸ್ಥಳ ಪರಿಚಯ) | |
| | ನೀನಾರಿಗಾದೆಯೋ ಎಲೆ ಮಾನವ | (ಕವಿತೆ) | |
| **2.** | **ಒಂದಾಗಿ ಬಾಳೋಣ** | | **27** |
| | ಕೆಚ್ಚಿನ ಕಿಡಿ | (ಕಥೆ) | |
| | ಐದು ಬೆರಳು ಕೂಡಿ | (ಕವಿತೆ) | |
| | ಸಮಬಾಳು | (ಪ್ರಬಂಧ) | |
| **3.** | **ಸುತ್ತ ಮುತ್ತ** | | **41** |
| | ಮರವಿದ್ದು ಫಲವೇನು? | (ವಚನಗಳು) | |
| | ಆತ್ಮವಿಶ್ವಾಸದ ಗೆಲುವು | (ಲೇಖನ) | |
| | ಕೊಡದಪ್ಪ ಬಿಡದಪ್ಪ | (ಜನಪದ ಕತೆ) | |

1

# ವಸುಧೆಯ ವೈಭವ



ಮನುಷ್ಯನು ಪ್ರಾಕೃತಿಕ ವಿಕೋಪಗಳನ್ನು ಎದುರಿಸಿ ಜೀವಿಸಲು ಕಲಿತುಕೊಂಡಿದ್ದಾನೆ. ಪ್ರಕೃತಿಯಲ್ಲಿರುವ ಸುಂದರವಾದ ಗಿಡಮರ, ಪ್ರಾಣಿಪಕ್ಷಿ ಮತ್ತು ನದಿವನ ಮುಂತಾದವುಗಳ ಕುರಿತು ಹಾಡಿ ಹೊಗಳಿದ್ದಾನೆ. ನಮ್ಮ ನಾಡಿನಲ್ಲೂ ಸುಂದರವಾದ ಪ್ರವಾಸಿ ತಾಣಗಳಿವೆ. ಬೆಟ್ಟ, ಗುಡ್ಡ, ನದಿ, ಜಲಪಾತ, ಸರೋವರಗಳು ನಮ್ಮ ನಾಡಿನ ಸೌಂದರ್ಯವನ್ನು ಹೆಚ್ಚಿಸಿವೆ. ಸ್ವರ್ಗಸದೃಶವಾದ ಊರುಗಳೂ ಇಲ್ಲಿವೆ. ಪ್ರಕೃತಿಯಲ್ಲಿರುವ ಮೂಕ ಪ್ರಾಣಿಗಳು ಪರೋಪಕಾರಿಗಳಾಗಿ ಜೀವಿಸುತ್ತವೆ. ಪ್ರಕೃತಿಯ ಸಮತೋಲನ ಹಾಗೂ ಸೌಂದರ್ಯವನ್ನು ಕಾಪಾಡುವಲ್ಲಿ ಯಾರ ಪಾತ್ರವೂ ಕಿರಿದಲ್ಲ.

# ಮರು ಹುಟ್ಟು

ಪೂರ್ವಕಾಲದಲ್ಲಿ ಸತ್ಯವ್ರತರಾಜನು ಭರತ ಭೂಮಿಯ ದಕ್ಷಿಣ ಭಾಗದ ರಾಜ್ಯವನ್ನು ಆಳಿಕೊಂಡಿದ್ದನು. ಅವನು 'ಲೋಕಕಲ್ಯಾಣವೇ ತನ್ನ ಹಿತ' ಎಂದು ಭಾವಿಸಿಕೊಂಡಿದ್ದನು. ಪ್ರಜೆಗಳನ್ನು ಸ್ವಂತ ಮಕ್ಕಳಂತೆ ನೋಡಿಕೊಳ್ಳುತ್ತಿದ್ದನು. ಅವನು ವ್ರತನಿಷ್ಠನಾಗಿ ಹಣ್ಣುಹಂಪಲುಗಳನ್ನು ತಿಂದು ನೀರು ಕುಡಿಯುತ್ತಾ ಆಶ್ರಮದಲ್ಲಿ ಜೀವಿಸುತ್ತಿದ್ದನು.

ಒಂದು ದಿನ ಅವನು ಎಂದಿನಂತೆ ನದಿಗೆ ಹೋದನು. ಸ್ನಾನ ಮಾಡಿ ಅರ್ಘ್ಯವನ್ನು ಬಿಡಲು ಬೊಗಸೆಯಲ್ಲಿ ನೀರನ್ನು ತೆಗೆದುಕೊಂಡನು. ಆಗ ಬೊಗಸೆಯಲ್ಲಿ ಏನೋ ಹರಿದಾಡಿದಂತಾಯಿತು. ನೋಡಿದಾಗ ಪುಟ್ಟ ಮೀನೊಂದು ಕಂಡು ಬಂತು. ಅದನ್ನು ನದಿಗೆ ಬಿಡಬೇಕೆನ್ನುವಷ್ಟರಲ್ಲಿ ಅದು ರಾಜನನ್ನು ಕುರಿತು "ಅಯ್ಯಾ ರಾಜನೇ, ನನ್ನನ್ನು ಪುನಃ ನೀರಿನಲ್ಲಿ ಬಿಡಬೇಡ; ನನ್ನನ್ನು ಇತರ ಜಲಚರಗಳಿಂದ ರಕ್ಷಿಸು. ನಿನಗೆ ಒಳ್ಳೆಯದಾಗುವುದು" ಎಂದು ನುಡಿಯಿತು. ರಾಜನು ಕನಿಕರದಿಂದ ಆ ಮೀನನ್ನು ತನ್ನ ಕಮಂಡಲದಲ್ಲಿಟ್ಟುಕೊಂಡು ಆಶ್ರಮಕ್ಕೆ ಹಿಂತಿರುಗಿದನು. ನೀರು ತುಂಬಿದ್ದ ಮಡಕೆಯಲ್ಲಿ ಆ ಮೀನನ್ನು ಬಿಟ್ಟನು. ಮರುದಿನ ಮುಂಜಾನೆ ಕಮಂಡಲ ತೆಗೆದುಕೊಂಡು ನದಿಯ ಕಡೆ ಹೊರಡುವಷ್ಟರಲ್ಲಿ "ರಾಜಾ, ನನಗೆ ಇಲ್ಲಿ ಸ್ಥಳ ಸಾಕಾಗುತ್ತಿಲ್ಲ. ದಯವಿಟ್ಟು ನನ್ನನ್ನು ಇಲ್ಲಿಂದ ಬೇರೆ ಕಡೆಗೆ ಸಾಗಿಸು" ಎಂಬ ಧ್ವನಿ ಕೇಳಿಸಿತು. ರಾಜನು ಅತ್ತ ನೋಡಿದಾಗ ಮಡಕೆಯಲ್ಲಿ ಹಾಕಿದ್ದ ಮೀನು ಮಡಕೆಯಷ್ಟು ದೊಡ್ಡದಾಗಿತ್ತು. ಸತ್ಯವ್ರತನಿಗೆ ಆಶ್ಚರ್ಯವಾಯಿತು.



ಅದನ್ನು ಸಮೀಪದ ನೀರಿನ ಹೊಂಡದಲ್ಲಿ ಹಾಕಿದನು.  ದಿನ ಕಳೆದಾಗ ಅದು ಹೊಂಡದಷ್ಟು ದೊಡ್ಡದಾಗಿತ್ತು. ಅದು ರಾಜನೊಡನೆ "ಮಹಾರಾಜಾ, ನನ್ನನ್ನೀಗ ನದಿಯಲ್ಲಿ ಬಿಡು" ಎಂದಿತು. ಮೀನಿನ ಕೋರಿಕೆಯನ್ನು ರಾಜನು ಈಡೇರಿಸಿದನು.

ಹೀಗೆಯೇ ದಿನಗಳು ಕಳೆದುವು. ಒಂದು ದಿನ ರಾಜನು ಮುಂಜಾವಿನಲ್ಲಿ ಅರ್ಘ್ಯ ಬಿಡುತ್ತಿರುವಾಗ ದೊಡ್ಡದಾದ ಮೀನೊಂದು  ರಾಜನ ಬಳಿ ಬಂದಿತು. ಅದು ರಾಜನೊಡನೆ "ಮಹಾನುಭಾವ, ನಾನು ನಿನ್ನಿಂದ ಸಂರಕ್ಷಿಸಲ್ಪಟ್ಟ ಮೀನು. ನೀನು ಮಹದುಪಕಾರ ಮಾಡಿದೆ. ಇನ್ನೊಂದು  ಉಪಕಾರ ಆಗಬೇಕಿತ್ತು. ದಯವಿಟ್ಟು ನನ್ನನ್ನು ಸಮುದ್ರದಲ್ಲಿ ಬಿಡು" ಎಂದು ಹೇಳಿತು. ಅದು ಕ್ಷಣಕ್ಷಣವೂ ಬೆಳೆಯುತ್ತಿತ್ತು. ಸತ್ಯವ್ರತನು ಆ ಮೀನನ್ನು ಕೂಡಲೇ ಸಮುದ್ರದಲ್ಲಿ ಬಿಟ್ಟನು. ಆಗ ಆ ಮೀನು "ಎಲೈ ಸತ್ಯವ್ರತ, ನೀನು ಭಕ್ತಿಯಿಂದ ಮಾಡಿದ ಸೇವೆಯನ್ನು ಮೆಚ್ಚಿದ್ದೇನೆ. ನಿನ್ನಿಂದ ಒಂದು ಮಹತ್ಕಾರ್ಯ ಆಗಬೇಕಿದೆ. ಇಂದಿನಿಂದ ಏಳನೆಯ ದಿನ ಮಹಾಪ್ರಳಯ ಸಂಭವಿಸಲಿದೆ. ಆಗ ಜಗತ್ತು ಸಂಪೂರ್ಣ ಕತ್ತಲಾಗುವುದು. ಜಗತ್ತು ಹೆದ್ದೆರೆಗಳಿಂದ ಅಲ್ಲೋಲಕಲ್ಲೋಲವಾಗುವುದು. ಸಸ್ಯರಾಶಿ, ಜೀವಸಂಕುಲಗಳೆಲ್ಲ ನೀರಿನಲ್ಲಿ ಮುಳುಗಿ ಹೋಗುವುವು. ಗುಡ್ಡಬೆಟ್ಟಗಳನ್ನು ಶರಧಿಯು ನುಂಗುವುದು. ಹಾಗಾಗಿ ನೀನು ಇಂದಿನಿಂದಲೇ ಶ್ರದ್ಧೆಯಿಂದ ಸಕಲ ಸಸ್ಯರಾಶಿಗಳ ಬೀಜಗಳನ್ನು ಶೇಖರಿಸಿಟ್ಟುಕೋ. ಪ್ರತಿಯೊಂದು ಜೀವಿಯ ಪ್ರಭೇದಗಳನ್ನು ಸಂಗ್ರಹಿಸಿಟ್ಟುಕೊ ಸಮುದ್ರದಲ್ಲಿ ನಿನಗಾಗಿ ದೊಡ್ಡ ನಾವೆಯೊಂದು ಕಾಯುತ್ತಿರುತ್ತದೆ. ನೀನು ಎಲ್ಲಾ ಕೆಲಸಗಳನ್ನು ಮುಗಿಸಿದ ಬಳಿಕ ನಾವೆಯನ್ನು ಹತ್ತು. ಆಗ ನಾನು ಕೂಡ ಅಲ್ಲಿರುತ್ತೇನೆ. ನೀನು ದೊಡ್ಡ ಹಗ್ಗದಿಂದ  ನಾವೆಯನ್ನೂ ನನ್ನನ್ನೂ ಕಟ್ಟಿ ಜೋಡಿಸು" ಎಂದು ಬೇಕಾಗಿರುವ ಕಾರ್ಯಗಳ ಬಗ್ಗೆ ವಿವರಿಸಿ ಹೇಳಿತು. ರಾಜನು ಮೀನಿನ ಮಾತುಗಳನ್ನು ಒಪ್ಪಿಕೊಂಡು ಅದು ಹೇಳಿದ ರೀತಿಯಲ್ಲಿ ಎಲ್ಲಾ ಸಿದ್ಧತೆಗಳನ್ನೂ ಮಾಡಿಕೊಂಡನು.



ಆರು ದಿನಗಳು ದಾಟಿದವು. ಮೀನು ಹೇಳಿದಂತೆಯೇ ಪ್ರಳಯದ ಸೂಚನೆಗಳು ಕಾಣಿಸಿದುವು. ಪಶುಪಕ್ಷಿಗಳು ವಿಚಿತ್ರವಾಗಿ ಕೂಗತೊಡಗಿದುವು. ಕಾಡುಮೃಗಗಳು ದಿಕ್ಕೆಟ್ಟವರಂತೆ ಓಡತೊಡಗಿದುವು. ಆಗಸವನ್ನು ಕಾರ್ಮೋಡಗಳು ಆವರಿಸಿದುವು. ಭೀಕರವಾದ ಬಿರುಗಾಳಿ ಬೀಸತೊಡಗಿತು. ಗಿಡಮರಗಳು ಬುಡಸಮೇತ ಕಿತ್ತು ಆಕಾಶದಲ್ಲಿ ಹಾರತೊಡಗಿದುವು. ಜಡಿಮಳೆ ಆರಂಭವಾಯಿತು. ನಿರಂತರವಾಗಿ ಹಲವು ದಿನಗಳ ಕಾಲ ಧಾರಾಕಾರ ಮಳೆ ಸುರಿಯಿತು. ಪ್ರಪಂಚದ ಸಕಲ ಪ್ರಾಣಿಗಳು ನೀರಲ್ಲಿ ಕೊಚ್ಚಿಹೋದುವು. ನೀರು ಉಕ್ಕೇರತೊಡಗಿತು. ಗುಡ್ಡ ಬೆಟ್ಟಗಳು ನೀರಲ್ಲಿ ಮುಳುಗಿದುವು. ಎಲ್ಲಿ ನೋಡಿದರೂ ನೀರೇನೀರು. ಸತ್ಯವ್ರತನು ಮೀನು ಹೇಳಿದಂತೆಯೇ ತಾನು ಸಂಗ್ರಹಿಸಿದ್ದೆಲ್ಲವನ್ನು ನಾವೆಯಲ್ಲಿ ತುಂಬಿಸಿ ಅದರಲ್ಲಿ ಕುಳಿತುಕೊಂಡಿದ್ದನು. ಲೋಕವನ್ನು ಆವರಿಸಿದ್ದ ನೀರಿನಲ್ಲಿ ರಾಜನು ಕುಳಿತಿದ್ದ ಬೃಹತ್ ನಾವೆಯು ತೇಲುತ್ತಿತ್ತು. ನೀರು ಇನ್ನೂ ಮೇಲೇರತೊಡಗಿತು. ನಾವೆಯು ಎತ್ತರೆತ್ತರಕ್ಕೆ ಏರತೊಡಗಿತು. ಆಗ ಜಲರಾಶಿಯನ್ನು ಸೀಳಿಕೊಂಡು, ದೈತ್ಯ ಅಲೆಗಳನ್ನು ಎಬ್ಬಿಸುತ್ತಾ ಮೀನೊಂದು ಬಂದೇಬಿಟ್ಟಿತು. ಅದು ಬೃಹದಾಕಾರವಾಗಿ ಬೆಳೆದಿತ್ತು. ಅದರ ತಲೆಯಲ್ಲಿ ಒಂದು ಕೋಡು ಇತ್ತು. ತನ್ನ ಬಳಿ ಬಂದ ಮೀನನ್ನು ಸತ್ಯವ್ರತನು ಬೆರಗಾಗಿ ನೋಡಿದನು. ಕೂಡಲೇ ಅವನು ಹಗ್ಗದ ಒಂದು ತುದಿಯನ್ನು ನಾವೆಗೂ ಇನ್ನೊಂದು ತುದಿಯನ್ನು ಮೀನಿನ ಕೋಡಿಗೂ ಬಿಗಿಯಾಗಿ ಕಟ್ಟಿದನು. ನಾವೆಯು ಮೀನಿನ ರಕ್ಷಣೆಯಿಂದಾಗಿ ಸಾಗರದಲ್ಲಿ ತೇಲತೊಡಗಿತು.

ಹಲವಾರು ವರ್ಷಗಳು ಉರುಳಿದುವು. ಸಾಗರದ ಉಬ್ಬರ ಇಳಿಯತೊಡಗಿತು. ಭೂಮಿ ಮತ್ತು ಆಕಾಶ ಶುಭ್ರವಾದುವು. ರಾಜನು ತಾನು ಸಂಗ್ರಹಿಸಿದ್ದ ಬೀಜಗಳಿಂದ ಸೃಷ್ಟಿಕಾರ್ಯದಲ್ಲಿ ತೊಡಗಿದನು. ಭೂಮಿಯಲ್ಲಿ ಮತ್ತೆ ಸಸ್ಯ ಸಂಕುಲಗಳು ಹುಟ್ಟಿಕೊಂಡುವು. ಪ್ರಾಣಿಪಕ್ಷಿಗಳು, ಕೀಟಜಂತುಗಳು ಸಕಲವೂ ಸೃಷ್ಟಿಯಾದುವು. ಇಲ್ಲಿ ಸತ್ಯವ್ರತನು ತನ್ನ ಪ್ರಜೆಗಳ ಕ್ಷೇಮಕ್ಕಾಗಿ ಹಲವಾರು ವರ್ಷಗಳ ಕಾಲ ನಿಸ್ವಾರ್ಥದಿಂದ ರಾಜ್ಯವಾಳಿದನು.

## ಚಟುವಟಿಕೆಗಳು

### ಗಟ್ಟಿಯಾಗಿ ಓದಿರಿ

- ಈ ಕಥೆಯಲ್ಲಿ ನಿಮಗೆ ಇಷ್ಟವಾದ ಭಾಗವನ್ನು ಸ್ವರಭಾರಯುಕ್ತವಾಗಿ ಓದಿರಿ.

### ಚರ್ಚಿಸಿರಿ

- ಮೀನು ಹೇಳಿದಂತೆ ಸಕಲ ಜೀವಿಗಳ ಪ್ರಭೇದವನ್ನು ಸಂಗ್ರಹಿಸಲು ಸತ್ಯವ್ರತನಿಗೆ ಸಾಧ್ಯವಾಗದಿರುತ್ತಿದ್ದರೆ ಏನಾಗುತ್ತಿತ್ತು?

## ಉತ್ತರಿಸಿರಿ

- ಭರತ ಭೂಮಿಯ ದಕ್ಷಿಣ ಭಾಗವನ್ನು ಆಳಿಕೊಂಡಿದ್ದ ಅರಸ ಯಾರು?
- ರಾಜನಿಗೆ ಕಾಣಿಸಿದ ಪ್ರಳಯದ ಸೂಚನೆಗಳು ಯಾವುವು?
- ಮೀನು ರಾಜನಿಗೆ ಒಪ್ಪಿಸಿದ ಕಾರ್ಯಗಳು ಯಾವುವು?

## ಸಂದರ್ಭ ತಿಳಿಸಿರಿ

- "ಅಯ್ಯಾ ರಾಜನೇ, ನನ್ನನ್ನು ಪುನಃ ನೀರಿನಲ್ಲಿ ಬಿಡಬೇಡ"
- "ಎಲೈ ಸತ್ಯವ್ರತ, ನಿನ್ನಿಂದ ಒಂದು ಮಹತ್ಕಾರ್ಯ ಆಗಬೇಕಿದೆ"

## ಪಾತ್ರಚಿತ್ರಣ ಮಾಡಿರಿ

- ಈ ಕಥೆಯಲ್ಲಿ ಪ್ರಧಾನವಾಗಿ ಬಂದಿರುವ ಕಥಾಪಾತ್ರಗಳು ಯಾವುವು? ಅವುಗಳಲ್ಲಿ ನಿಮಗೆ ಇಷ್ಟವಾದ ಕಥಾ ಪಾತ್ರದ ಕುರಿತು ಬರೆಯಿರಿ.

## ಊಹಿಸಿ ಬರೆಯಿರಿ

- ಭಯಾನಕ ಪ್ರಳಯ ಕಾಲವನ್ನು ಕಣ್ಣಾರೆ ವೀಕ್ಷಿಸಿದ ಸತ್ಯವ್ರತನ ಮನಸ್ಸಿನಲ್ಲಿ ಮೂಡಿದ ಭಾವನೆಗಳು ಏನಾಗಿರಬಹುದು? ಊಹಿಸಿ ಬರೆಯಿರಿ.

## ವರ್ಣನೆ ತಯಾರಿಸಿರಿ

- ಮಳೆಗಾಲದಲ್ಲಿ ಕೆಲವೊಮ್ಮೆ ಜಡಿಮಳೆ ಸುರಿಯುವುದುಂಟು. ಅಂತಹ ಮಳೆಯನ್ನು ವರ್ಣಿಸಿ ಬರೆಯಿರಿ.

## ಪದ ವಿಂಗಡಿಸಿರಿ

- ಇಲ್ಲಿ ಎರಡು ಅಥವಾ ಎರಡಕ್ಕಿಂತ ಹೆಚ್ಚು ಪದಗಳು ಸೇರಿಕೊಂಡಿರುವ ಪದಗಳನ್ನು ಕೊಡಲಾಗಿದೆ. ಅವುಗಳನ್ನು ಅರ್ಥವ್ಯತ್ಯಾಸವಾಗದಂತೆ ವಿಂಗಡಿಸಿ ಬರೆಯಿರಿ.

| | | |
|---|---|---|
| ○ ಹರಿದಾಡಿದಂತಾಯಿತು | ○ ಬಿಡಬೇಕೆನ್ನುವಷ್ಟರಲ್ಲಿ | ○ ಆಶ್ಚರ್ಯವಾಯಿತು |
| ○ ನಿನಗೇನಾಗಬೇಕೆಂಬುದನ್ನು | ○ ಸಾಕಾಗುತ್ತಿಲ್ಲ | ○ ಬೃಹದಾಕಾರ |
| ○ ವರ್ಷಗಳುರುಳಿದುವು | ○ ದೊಡ್ಡದಾಗಿತ್ತು | ○ ಉಕ್ಕೇರತೊಡಗಿತು |

### ಸಂಯುಕ್ತ ವಾಕ್ಯಗಳನ್ನು ಸರಳವಾಕ್ಯಗಳಾಗಿ ಬರೆಯಿರಿ

- ಮಾದರಿಯಂತೆ ಕೆಳಗೆ ನೀಡಲಾದ ಸಂಯುಕ್ತ ವಾಕ್ಯಗಳನ್ನು ಆಶಯ ಕೆಡದಂತೆ ಸರಳವಾಕ್ಯಗಳಾಗಿ ಬರೆಯಿರಿ.

  ಮಾದರಿ : ಪೂರ್ವಕಾಲದಲ್ಲಿ ಸತ್ಯವ್ರತ ಎಂಬ ರಾಜನು ಭರತ ಭೂಮಿಯ ದಕ್ಷಿಣ ಭಾಗದ ರಾಜ್ಯವನ್ನು ಆಳಿಕೊಂಡಿದ್ದನು.

- ಪೂರ್ವಕಾಲದಲ್ಲಿ ಸತ್ಯವ್ರತ ಎಂಬ ರಾಜನು ಇದ್ದನು. ಅವನು ಭರತಭೂಮಿಯ ದಕ್ಷಿಣ ಭಾಗದ ರಾಜ್ಯವನ್ನು ಆಳಿಕೊಂಡಿದ್ದನು.
- ಒಂದು ದಿನ ರಾಜನು ಮುಂಜಾವಿನಲ್ಲಿ ಅರ್ಘ್ಯ ಬಿಡುತ್ತಿರುವಾಗ ದೊಡ್ಡದಾದ ಮೀನೊಂದು ರಾಜನ ಬಳಿಗೆ ಬಂದಿತು.
- ರಾಜನು ಮೀನಿನ ಮಾತುಗಳನ್ನು ಒಪ್ಪಿಕೊಂಡು ಅದು ಹೇಳಿದ ರೀತಿಯಲ್ಲಿಯೇ ಎಲ್ಲಾ ಸಿದ್ಧತೆಗಳನ್ನು ಮಾಡಿಕೊಂಡನು.
- ರಾಜನು ಸಂಗ್ರಹಿಸಿದ್ದೆಲ್ಲವನ್ನೂ ನಾವೆಯಲ್ಲಿ ತುಂಬಿಸಿ ಅದರಲ್ಲಿ ಕುಳಿತುಕೊಂಡನು.

### ವಾಕ್ಯ ರಚಿಸಿರಿ

- ಕೆಳಗಿನ ವಾಕ್ಯಗಳಲ್ಲಿ ಅಡಿಗೆರೆ ಎಳೆದ ಪದಗಳನ್ನು ಬಳಸಿ ಬೇರೆ ವಾಕ್ಯಗಳನ್ನು ರಚಿಸಿರಿ.
- ಮೀನಿನ ಕೋರಿಕೆಯನ್ನು ರಾಜನು ಈಡೇರಿಸಿದನು.
- ಜಗತ್ತು ಹೆದ್ದೆರೆಗಳಿಂದ ಅಲ್ಲೋಲಕಲ್ಲೋಲವಾಗುವುದು.
- ನೀನು ಸಂಗ್ರಹಿಸಿದ್ದನ್ನೆಲ್ಲ ಸುರಕ್ಷಿತವಾಗಿ ನಾವೆಯಲ್ಲಿ ಇಡಬಹುದು.
- ಸತ್ಯವ್ರತನು ಜಲಪ್ರಳಯದ ಸಂದರ್ಭದಲ್ಲಿ ಮಾಡಬೇಕಾದ ಕೆಲಸಗಳಿಗೆ ಸಿದ್ಧತೆಗಳನ್ನು ಕೈಗೊಂಡನು.
- ಭೂಮಿ ಮತ್ತು ಆಕಾಶ ಶುಭ್ರವಾದುವು.

# ನೇಸರು



ತೇರ ಏರಿ ಅಂಬರದಾಗೆ ನೇಸರು ನಗುತಾನೆ
ಮರಗಿಡ ತೂಗ್ಯಾವೆ–ಹಕ್ಕಿ ಹಾಡ್ಯಾವೆ;
ಬೀರ್ಯಾವೇ – ಚೆಲುವ – ಬೀರ್ಯಾವೇ
ಬಾ ನೋಡಿ ನಲಿಯೋಣ ತಮ್ಮಾ
ನಾವು ಹಾಡಿ ಕುಣಿಯೋಣ ತಮ್ಮಾ
ಬೇಲಿ ಮ್ಯಾಗೆ ಬಣ್ಣ ಬಣ್ಣದ ಹೂವು ಅರಳ್ಯಾವೆ
ಆ ಹೂವಿನ ತುಂಬ ಸಣ್ಣ ಚಿಟ್ಟೆ ಕುಂತಾವೆ
ಬಾಗಿ ಬೀಗಿ ಅತ್ತ ಇತ್ತ ಬಾಳೆ ಬಳುಕ್ಯಾವೆ
ಆ ಬಾಳೆ ವನವೇ ನಕ್ಕು ಹಣ್ಣು ತಂದಾವೆ–
ಕುಂತರೆ ಸೆಳೆವಾ
ಸಂತಸ ತರುವಾ
ಹೊಂಗೆ ಟೊಂಗೆ ತೂಗಿ–ಬಾಗಿ ಗಾಳಿ ಬೀಸ್ಯಾವೆ
ಭೂಮಿ ಮ್ಯಾಗೆ ಹಚ್ಚಹಚ್ಚಗೆ ಹಾದಿ ತೆರೆದಾವೆ
ಆ ಹಾದಿ ಅಕ್ಕಪಕ್ಕ ಬಳ್ಳಿ ಬೆಳೆದಾವೆ–
ಸಾಲು ಸಾಲು ಬೆಟ್ಟ ಗುಡ್ಡ ಮೌನ ತಳೆದಾವೆ.
ಆ ಮೌನದ ಗಾನ ಎಲ್ಲರ ಮನಸ ಸೆಳೆದಾವೆ–
ಭಾವ ಬಿರಿದು
ಹತ್ತಿರ ಕರೆದು
ಮಾವು ಬೇವು ತಾಳೆ ತೆಂಗು–ಲಾಲಿ ಹಾಡ್ಯಾವೆ
ಭೇದ ಭಾವ ಮುಚ್ಚುಮರೆ ಒಂದೂ ಮಾಡ್ದೇನೆ
ಆ ಸೂರ್ಯ ಒಂದೇ ಬೆಳಕ ನಮಗೆ ನೀಡ್ಯಾನೆ
ಗಾಳಿ ನೀರು ಎಲ್ಲ ಕೊಟ್ಟು ಜಗವ ನಡೆಸ್ಯಾನೆ
ಆ ಸಿರಿಯ ಹಂಚಿಕೊಂಡರೆ ಬಾಳು ಸವಿಜೇನೆ
ಪ್ರೀತಿ ಬೆಳೆದು
ಸ್ನೇಹ ತಳೆದು
ನಗ್ತಾ ನಗ್ತಾ ನಾವು ನೀವು – ಸವಿಯುವ ಸುಖವನ್ನೇ.

*ಡಾ। ದೊಡ್ಡರಂಗೇ ಗೌಡ*



## ಡಾ। ದೊಡ್ಡರಂಗೇ ಗೌಡ



ಡಾ। ದೊಡ್ಡರಂಗೇಗೌಡ ಅವರು ತುಮಕೂರು ಜಿಲ್ಲೆಯ ಮಧುಗಿರಿ ತಾಲೂಕಿನ ಕುರುಬರ ಹಳ್ಳಿಯಲ್ಲಿ 1946ರ ಫೆಬ್ರವರಿ 7ರಂದು ಜನಿಸಿದರು. ತಂದೆ ರಂಗೇ ಗೌಡರು, ತಾಯಿ ಅಕ್ಕಮ್ಮ. ಎಂ.ಎ, ಪಿ.ಎಚ್.ಡಿ. ಪದವಿ ಪಡೆದಿರುವ ಇವರು ವೃತ್ತಿಯಲ್ಲಿ ಶಿಕ್ಷಕರಾಗಿದ್ದರು. ಜಗಲಿ ಹತ್ತಿ ಇಳಿದು, ಕಣ್ಣು ನಾಲಗೆ ಕಡಲು, ನಾಡಾಡಿ, ಮೌನ ಸ್ಪಂದನ ಮುಂತಾದ ಕೃತಿಗಳನ್ನೂ ಅನೇಕ ಪ್ರವಾಸ ಕಥನಗಳನ್ನೂ ರಚಿಸಿದ್ದಾರೆ. ಇವರು ರಚಿಸಿದ ಚಲನ ಚಿತ್ರಗೀತೆಗಳು ಜನಪ್ರಿಯವಾಗಿವೆ. ರಾಜ್ಯ ಸಾಹಿತ್ಯ ಅಕಾಡಮಿ, ರಾಜ್ಯೋತ್ಸವ ಪ್ರಶಸ್ತಿ ಮುಂತಾದ ಪ್ರಶಸ್ತಿಗಳನ್ನು ಪಡೆದಿದ್ದಾರೆ.

## ಚಟುವಟಿಕೆಗಳು

### ಹಾಡಿರಿ

- ಈ ಪದ್ಯವನ್ನು ರಾಗವಾಗಿ ಹಾಡಿರಿ.

### ಉತ್ತರಿಸಿರಿ

- ತೇರನ್ನು ಏರಿ ಆಕಾಶದಲ್ಲಿ ನಗುವವನು ಯಾರು?
- ಎಲ್ಲರ ಮನವನ್ನು ಸೆಳೆದುದು ಯಾವುದು?
- ಬಾಳು ಸವಿಜೇನಾಗುವುದು ಯಾವಾಗ?

### ಕಾರಣ ಕೊಡಿರಿ

- ಈ ಕವನದಲ್ಲಿ ನಿಮಗೆ ಇಷ್ಟವಾದ ಸಾಲುಗಳನ್ನು ಗುರುತಿಸಿರಿ. ಅವು ಯಾಕೆ ಇಷ್ಟವಾದುವೆಂದು ಹೇಳಿರಿ.

### ಸ್ವಾರಸ್ಯ ಬರೆಯಿರಿ

- ಕೆಳಗೆ ಕೊಟ್ಟ ಪದ್ಯ ಭಾಗದ ಸ್ವಾರಸ್ಯ ಬರೆಯಿರಿ.

    ಮಾವು ಬೇವು ತಾಳೆ ತೆಂಗು–ಲಾಲಿ ಹಾಡ್ಯಾವೆ
    ಭೇದ ಭಾವ ಮುಚ್ಚುಮರೆ ಒಂದೂ ಮಾಡ್ದೇನೆ
    ಆ ಸೂರ್ಯ ಒಂದೇ ಬೆಳಕ ನಮಗೆ ನೀಡ್ಯಾನೆ
    ಗಾಳಿ ನೀರು ಎಲ್ಲ ಕೊಟ್ಟು ಜಗವ ನಡೆಸ್ಯಾನೆ
    ಆ ಸಿರಿಯ ಹಂಚಿಕೊಂಡರೆ ಬಾಳು ಸವಿಜೇನೆ

### ಆಶಯ ಬರೆಯಿರಿ

- ನೇಸರು ಪದ್ಯದ ಆಶಯವನ್ನು ಬರೆದು ತರಗತಿಯಲ್ಲಿ ಮಂಡಿಸಿರಿ.

### ಕವಿತೆ ರಚಿಸಿರಿ

- ಇಲ್ಲಿ ನೀಡಿರುವ ಸಾಲುಗಳನ್ನು ಮುಂದುವರಿಸಿ ಕವಿತೆಯೊಂದನ್ನು ರಚಿಸಿರಿ.

ರಾತ್ರಿ ಕಳೆಯಿತು

ಬೆಳಕು ಹರಿಯಿತು

ಹಕ್ಕಿ ಗೂಡನು ತೊರೆಯಿತು

..................................

..................................

..................................

### ಶಿಷ್ಟರೂಪ ಬರೆಯಿರಿ

- ಪದ್ಯದಲ್ಲಿ ಬರುವ ಗ್ರಾಮ್ಯ ಪದಗಳನ್ನು ಕಂಡುಹಿಡಿದು ಅವುಗಳ ಶಿಷ್ಟರೂಪವನ್ನು ಬರೆಯಿರಿ.

ಉದಾ: ತೂಗ್ಯಾವೆ – ತೂಗಿವೆ

ಹಾಡ್ಯಾವೆ – ಹಾಡಿವೆ

### ಟಿಪ್ಪಣಿ ಬರೆಯಿರಿ

- 'ಸೂರ್ಯನಿಲ್ಲದ ಜಗತ್ತನ್ನು ಊಹಿಸಲು ಅಸಾಧ್ಯ' ಈ ಮಾತಿನ ಬಗ್ಗೆ ನಿಮ್ಮ ಅಭಿಪ್ರಾಯವನ್ನು ಬರೆಯಿರಿ.


### ಸಂಗ್ರಹಿಸಿರಿ

- ಪ್ರಕೃತಿಗೆ ಸಂಬಂಧಿಸಿದ ಗೀತೆಗಳನ್ನು ಸಂಗ್ರಹಿಸಿ ಸಂಚಿಕೆ ತಯಾರಿಸಿರಿ.

# ಪ್ರವಾಸಿಗರ ಸ್ವರ್ಗ – ವಯನಾಡು

ಕರ್ನಾಟಕ ಹಾಗೂ ತಮಿಳುನಾಡಿನ ಗಡಿಯಾಗಿರುವ ‘ವಯನಾಡು’ ಕೇರಳ ರಾಜ್ಯದ ಒಂದು ಜಿಲ್ಲೆಯಾಗಿದೆ. ಕಣ್ಣೂರಿನಿಂದ ಪೂರ್ವಕ್ಕೆ 112 ಕಿ.ಮೀ. ಸಂಚರಿಸಿದರೆ ಸುಂದರ ಪ್ರೇಕ್ಷಣೀಯ ಸ್ಥಳವಾದ ವಯನಾಡನ್ನು ತಲುಪಬಹುದು. ‘ವಯನಾಡು’ ಎಂಬುದು “ ‘ಬಯಲುಗಳ ನಾಡು’ ; ‘ವಯಲ್‌ನಾಡ್’ ಬಳಿಕ ವಯನಾಡಾಗಿ ರೂಪಾಂತರಗೊಂಡಿತು” ಎಂಬ ಹೇಳಿಕೆಯಿದೆ. ವಯನಾಡು ವಿಶಾಲವಾದ ಬಯಲುಗಳಲ್ಲದೆ ಕಾಡುಗಳೂ ಪರ್ವತಗಳೂ ನದಿಗಳೂ ಜಲಾಶಯಗಳೂ ದ್ವೀಪಗಳೂ ಇರುವ ನಯನಮನೋಹರವಾದ ಪ್ರದೇಶ. ಅದು ಯಾತ್ರಿಕರನ್ನು ಕೈಬೀಸಿ ಕರೆಯುತ್ತಿರುವ ರಮಣೀಯ ತಾಣಗಳನ್ನು ಹೊಂದಿದೆ. ಚಾರಣಿಗರ, ಪರಿಸರ ಪ್ರಿಯರ, ಪಕ್ಷಿ ಪ್ರೇಮಿಗಳ, ಕಣ್ಮನಗಳನ್ನು ತಣಿಸುವ ಕೇರಳದ ಏಕೈಕ ಜಿಲ್ಲೆ ವಯನಾಡು ಎಂಬುದರಲ್ಲಿ ಎರಡು ಮಾತಿಲ್ಲ.

ವಯನಾಡು ಜಿಲ್ಲೆಯ ಉತ್ತರ ಭಾಗದಲ್ಲಿ ಪಳಶ್ಶಿರಾಜನ ಸ್ಮಾರಕ, ಪಕ್ಷಿಪಾತಾಳಂ, ಬೇಗೂರು ವನ್ಯಮೃಗ ಸಂರಕ್ಷಣಾ





ಕೇಂದ್ರ, ತೋಲ್ಪೆಟ್ಟಿ ಅರಣ್ಯ ಜೀವಿ ಸಂರಕ್ಷಣಾಕೇಂದ್ರಗಳಿದ್ದರೆ, ಪೂರ್ವದಲ್ಲಿ ಮುತ್ತಙ್ಙ ವನ್ಯಮೃಗ ಸಂರಕ್ಷಣಾ ಕೇಂದ್ರವಿದೆ. ದಕ್ಷಿಣ ಭಾಗದಲ್ಲಿ ಪೋಕ್ಕೋಡು ಸರೋವರ, ಕಾಂತನ್‌ಪ್ಪಾರ, ಸೂಚಿಪ್ಪಾರ, ಮೀನುಮುಟ್ಟಿ ಜಲಪಾತಗಳೂ ನೀಲಿಮಲೆ ವೀಕ್ಷಣಾ ಕೇಂದ್ರ ಕೂಡಾ ಇವೆ. ಇವಲ್ಲದೆ ಬಾಣಾಸುರ ಸಾಗರ ಅಣೆಕಟ್ಟು, ಎಡಕಲ್ಲು ಗುಡ್ಡ, ಗುಹೆಗಳು ಹಾಗೂ ಹಲವಾರು ಜೈನ ಕ್ಷೇತ್ರಗಳು ಇಲ್ಲಿವೆ. 'ಇಲ್ಲಿ ಹರಿಯುವ ಪಾಪನಾಶಿನಿಯಲ್ಲಿ ಸ್ನಾನ ಮಾಡಿದರೆ ಹೆಸರೇ ಸೂಚಿಸುವಂತೆ ಮನುಷ್ಯನ ಜನ್ಮಜನ್ಮಾಂತರದ ಪಾಪಗಳೆಲ್ಲವೂ ನೀಗುತ್ತವೆ' ಎಂಬ ನಂಬಿಕೆಯಿದೆ. ಪಾಪನಾಶಿನಿಯ ಸಮೀಪದಲ್ಲಿರುವ ತಿರುನೆಲ್ಲಿ ಮಹಾವಿಷ್ಣು ದೇವಸ್ಥಾನವನ್ನು ದಕ್ಷಿಣಕಾಶಿಯೆಂಬುದಾಗಿ ತಿಳಿಯುತ್ತಾರೆ. ಮೋಕ್ಷಪ್ರಾಪ್ತಿಯಾಗುವ ಕ್ಷೇತ್ರವೆಂದು ತಿಳಿಯಲ್ಪಡುವುದರಿಂದ ಇಲ್ಲಿ ದಿನವೂ ನೂರಾರು ತೀರ್ಥಾಟಕರು ಬಂದು ಪಿತೃಶ್ರಾದ್ಧವನ್ನು ಮಾಡುತ್ತಾರೆ.

ತಿರುನೆಲ್ಲಿ ಬೆಟ್ಟದ ತಪ್ಪಲಿನಲ್ಲಿ ಮುಂದುವರಿದರೆ ಪಕ್ಷಿಪಾತಾಳಕ್ಕೆ ತಲುಪಬಹುದು. ಕರ್ನಾಟಕದ ಗಡಿಯನ್ನು ಹಾದು ಇಲ್ಲಿಗೆ ಸುಲಭವಾಗಿ ತಲುಪಬಹುದು. ಪ್ರಯಾಣದ ಮಧ್ಯೆ ಆನೆಗಳ ಹಿಂಡನ್ನೂ ಕಾಡುಕೋಣಗಳ ಗುಂಪನ್ನೂ ಕಾಣಬಹುದು. ಇಲ್ಲಿ ಹುಲ್ಲುಗಾವಲನ್ನೂ ಹಿಂದಿಕ್ಕಿ ಮುಂದೆ ಸಾಗಿದಾಗ ಮೂರು ಆನೆಗಳನ್ನು ನಿಲ್ಲಿಸಿದಷ್ಟು ಎತ್ತರದ ಬಂಡೆಗಳ ಗುಂಪು ಕಾಣಸಿಗುತ್ತದೆ. ಅಲ್ಲಿ ಒಂದರ ಮೇಲೊಂದರಂತೆ ಜೋಡಿಸಿಟ್ಟ ಬಂಡೆಗಳು ಮತ್ತು ಅಂತಸ್ತುಗಳಾಗಿ ಹಲವಾರು ಗುಹೆಗಳು ಗೋಚರಿಸುತ್ತವೆ. ಬಂಡೆಗಳಿಂದ ಬಂಡೆಗಳಿಗೆ ಸಾಗುವುದು ಅಷ್ಟು ಸುಲಭವಲ್ಲ. ತೆವಳಿಯೂ ನುಸುಳಿಯೂ ಸಾಗಬೇಕು. ಪಕ್ಷಿಪಾತಾಳವು ಹಲವು ಅಪೂರ್ವ ಪಕ್ಷಿಗಳ ವಾಸಸ್ಥಳ. ಕೇರಳದ ರಾಜ್ಯ ಪಕ್ಷಿಯಾದ ದೊಡ್ಡಕೊಂಬು ಕೊಕ್ಕಿನ ಹಕ್ಕಿ (ಬೂದು ಮಲೆಮಂಗಟ್ಟೆ ಹಕ್ಕಿ) ಯನ್ನೂ ತನ್ನ ಎಂಜಲನ್ನೇ ಬಳಸಿ ಗೂಡು ನಿರ್ಮಿಸುವ 'ಎಡಿಬಿಲ್‌ನೆಸ್ಟ್ ಸ್ವಿಫ್ಟ್‌ಲೆಟ್' ಎನ್ನುವ ಪಕ್ಷಿಯನ್ನೂ ಇಲ್ಲಿ ಕಾಣಬಹುದು.

ಕನ್ನಡದ ಪ್ರಸಿದ್ಧ ಚಲನಚಿತ್ರಗಳಲ್ಲೊಂದಾದ 'ಎಡಕಲ್ಲು ಗುಡ್ಡದ ಮೇಲೆ' ಎಂಬುದು ಚಿತ್ರೀಕರಣಗೊಂಡ ಎಡಕಲ್ಲು ಗುಡ್ಡೆಯೂ ಗುಹೆಯೂ ವಯನಾಡಿನಲ್ಲೇ ಇರುವುದು. "ಈ ಎಡಕಲ್ಲು ಗುಹೆ ಬಹಳ ವರ್ಷಗಳ ಹಿಂದೆ ಉಂಟಾದ ಭೂಕಂಪದಿಂದಾಗಿ ಚದುರಿ ಹೋದ ಬಂಡೆಗಳಿಂದ ನಿರ್ಮಾಣಗೊಂಡುದಾಗಿರಬಹುದು" ಎಂಬುದು ಇತಿಹಾಸಕಾರರ ಅಂಬೋಣ. ಇದು ಪುರಾತನ ಮಾನವನ ವಾಸಸ್ಥಳವಾಗಿತ್ತೆಂಬುದಕ್ಕೆ ಕುರುಹಾಗಿ ಈ ಗುಹೆಯ ಬಂಡೆಗಳಲ್ಲಿ ಪ್ರಾಚೀನವಾದ ಶಿಲಾಲಿಪಿಗಳನ್ನು ಕಾಣಬಹುದು. ಈ ಗುಡ್ಡವು ಸಮುದ್ರಮಟ್ಟದಿಂದ 4000 ಅಡಿ ಎತ್ತರದಲ್ಲಿದೆ. 96 ಅಡಿ ಉದ್ದವೂ

20–22 ಅಡಿ ಅಗಲವೂ ಇರುವ ಬಿರುಕಿನ ಮೇಲೆ ಬೃಹದಾಕಾರದ ಬಂಡೆಯೊಂದು ಬಿದ್ದು ಈ ಗುಹೆಯು ರೂಪುಗೊಂಡಿದೆ. ಎಡೆಯಲ್ಲಿ ಕಲ್ಲು ಬಿದ್ದು ಉಂಟಾದುದು ಎಂಬುದರಿಂದಾಗಿ ಇದಕ್ಕೆ ಎಡಕಲ್ಲು ಎಂಬ ಹೆಸರುಂಟಾಯಿತು.

ವಯನಾಡಿನ ಮೇಪ್ಪಾಡಿಯಲ್ಲಿ ಚೆಂಬ್ರಮಲೆಯಿದೆ. ಸಾಹಸಿಗರಿಗೆ ಈ ಪ್ರದೇಶವು ಒಂದು ಸವಾಲಾಗಿದೆ. ಇದು ಸಮುದ್ರಮಟ್ಟದಿಂದ 6300 ಅಡಿ ಎತ್ತರದಲ್ಲಿದೆ. ಚೆಂಬ್ರಕ್ಕೆ ಹೋಗಬೇಕಿದ್ದರೆ ಮೇಪ್ಪಾಡಿ ಅರಣ್ಯ ಸಂರಕ್ಷಣ ಸಮಿತಿ ಕಛೇರಿಯಲ್ಲಿ ಹೆಸರು, ವಿಳಾಸವನ್ನು ಕೊಟ್ಟು ಅನುಮತಿ ಪತ್ರ ಪಡೆಯಬೇಕು. ಸ್ವಲ್ಪ ಮುಂದೆ ಸಮತಟ್ಟಾದ ದಾರಿಯಲ್ಲಿ ನಡೆದಾಗ ವೀಕ್ಷಣಾ ಗೋಪುರ ಸಿಗುವುದು. ಅಲ್ಲಿಂದ ಮುಂದಿನ ಹಾದಿ ಮೇಲುಮೇಲಕ್ಕೆ ಸಾಗುವುದು. ಕಾಲ್ನಡೆಯಿಂದ 4–5 ಮೈಲಿಗಳಷ್ಟು ಮೇಲಕ್ಕೆ ತಲುಪಿದಾಗ ಒಂದು ಸುಂದರ ಸರೋವರ ಕಾಣಸಿಗುವುದು. ಹೃದಯದ ಆಕೃತಿಯಲ್ಲಿರುವ ಮತ್ತು ಎಂದೂ ಬತ್ತದ ಈ ತಟಾಕಕ್ಕೆ ಹೃದಯತಟಾಕವೆಂಬ ಹೆಸರು ಅನ್ವರ್ಥವಾಗಿದೆ. ಚೆಂಬ್ರಮಲೆಯ ತುತ್ತತುದಿ ತಲುಪಲು ಮತ್ತೂ ಮೇಲಕ್ಕೆ ಸಾಗಬೇಕು. ಅಲ್ಲಿಂದ ವೈತ್ತಿರಿ, ಕಲ್ಪಟ್ಟ, ಕಾರಾಪುಳ ಅಣೆಕಟ್ಟು , ಬಾಣಾಸುರ ಸಾಗರ ಅಣೆಕಟ್ಟು..., ಹೀಗೆ ಒಂದೇ ಎರಡೇ....! ಮನರಂಜಿಸುವ, ಕಣ್ತಣಿಸುವ ಹಲವಾರು ದೃಶ್ಯಗಳನ್ನು ಕಾಣಬಹುದು.

ಮನುಷ್ಯವಾಸವಿಲ್ಲದ ಹಲವಾರು ಚಿಕ್ಕ ಚಿಕ್ಕ ದ್ವೀಪಗಳೂ ಇಲ್ಲಿವೆ. ಇವುಗಳನ್ನು ಕುರುವಾ ದ್ವೀಪಗಳೆಂದು ಕರೆಯುತ್ತಾರೆ. ಕಪಿನೀ (ಕಬಿನೀ) ನದಿಯಲ್ಲಿ ಹರಡಿಕೊಂಡಿರುವ ಈ ದ್ವೀಪಗಳಲ್ಲಿ ಬಿದಿರುಗಳೂ ದೊಡ್ಡ ದೊಡ್ಡ ಮರಗಳೂ ಕಾಂಡ್ಲಾ ಕಾಡುಗಳೂ ಇವೆ. ಈ ದ್ವೀಪಗಳು ವಿವಿಧ ತರದ ಪಕ್ಷಿಗಳ ಧಾಮವೂ ಹೌದು. ಅತ್ಯಂತ ದೊಡ್ಡ ದ್ವೀಪವನ್ನು ಸುತ್ತಿ ಬರಲು ಮೂರು ಗಂಟೆಗಳ ಸಮಯಾವಕಾಶ ಬೇಕು. ಸಂಚಾರಕ್ಕೆ ತೆಪ್ಪಗಳನ್ನು ಅಥವಾ ಬೋಟುಗಳನ್ನು ಉಪಯೋಗಿಸಬಹುದು. ಬಿದಿರಿನಿಂದ ನಿರ್ಮಿಸಿದ ಸೇತುವೆ ಮತ್ತು ಬೃಹತ್ ಗಾತ್ರದ ಮರಗಳು ಇಲ್ಲಿನ ವಿಶೇಷತೆಗಳಾಗಿವೆ.

ಮುತ್ತಜ್ಜ ಹಾಗೂ ತೋಲ್ಪೆಟ್ಟಿ ವನಗಳಲ್ಲಿ ಸಂಚರಿಸುವಾಗ ಕಾಡಾನೆಗಳ ದರ್ಶನವಾಗುತ್ತದೆ. ಸಾಮಾನ್ಯವಾಗಿ ಆನೆಗಳು





ಹಿಂಡುಹಿಂಡಾಗಿ ಸಂಚರಿಸುತ್ತವೆ. ಸದ್ದುಗದ್ದಲವಿಲ್ಲದೆ ನಾವಿದ್ದರೆ ಆನೆಗಳು ಶಾಂತವಾಗಿ ಕಾಡಿನೊಳಗೆ ಹೋಗುತ್ತವೆ. ಒಂಟಿಸಲಗವಾಗಿದ್ದರೆ ಪ್ರಯಾಣಿಕರು ಎಚ್ಚರಿಕೆಯಿಂದ ಇರಬೇಕಾದುದು ಅಗತ್ಯವಾಗಿದೆ. ಪ್ರಾತಃಕಾಲದಲ್ಲಿ ಮತ್ತು ಸೂರ್ಯಾಸ್ತಮಾನ ಸಮಯಗಳಲ್ಲಿ ಕಾಡಾನೆಗಳನ್ನು ಹಾಗೂ ಇತರ ಮೃಗಗಳನ್ನು ಹೆಚ್ಚಾಗಿ ಕಾಣಬಹುದು. ಈ ಕಾಡುಗಳಲ್ಲಿ ಹಲವು ತರದ ಜಿಂಕೆಗಳು, ತೋಳಗಳು ಹಾಗೂ ವಿವಿಧ ತರದ ಪಕ್ಷಿಗಳು ಕಂಡುಬರುತ್ತವೆ.

ವಯನಾಡಿನ ಮೇಪ್ಪಾಡಿಯಿಂದ 13 ಕಿ.ಮೀ. ದೂರದಲ್ಲಿರುವ 'ಸೂಜಿಪ್ಪಾರ' ಜಲಪಾತವು ಹೆಸರೇ ಸೂಚಿಸುವಂತೆ ಸೂಜಿಯಂತೆ ನಿಂತಿರುವ ಕಲ್ಲುಗಳ ಮೇಲಕ್ಕೆ ಧುಮುಕುವ ಈ ಸುಂದರ ದೃಶ್ಯವು ಯಾತ್ರಿಕರನ್ನು ಸೂಜಿಗಲ್ಲಿನಂತೆ ತನ್ನೆಡೆಗೆ ಸೆಳೆಯುತ್ತದೆ. 'ಕಾಂತನ್‌ಪಾರ' ಜಲಪಾತವು ಸುಂದರವಾಗಿದ್ದು ಕಾಂತದಂತೆ ಪ್ರಯಾಣಿಕರನ್ನು ತನ್ನ ಕಡೆಗೆ ಆಕರ್ಷಿಸುತ್ತದೆ. ಶಿಲಾಯುಗದ ಜನರು ವಾಸಿಸುತ್ತಿದ್ದ 'ಮುನಿಯರ'ಗಳೂ (ಮುನಿಕಲ್ಲು) ಇಲ್ಲಿವೆ. 'ಉದಯ ಸೂರ್ಯ'ನ ಕಣಿವೆಯು ವಯನಾಡಿನ ಅತ್ಯಂತ ಸುಂದರವಾದ ವೀಕ್ಷಣಾ ಕೇಂದ್ರವಾಗಿದೆ. ಪೂರ್ವದಲ್ಲಿ 'ಮೀನ್‌ಮುಟ್ಟಿ' ಜಲಪಾತವೂ ಪಶ್ಚಿಮದಲ್ಲಿ ಇನ್ನೊಂದು ಜಲಪಾತವೂ ಇದೆ. ಇವೆರಡೂ ಸೇರಿ ಕಾಡುಗಳ ಮಧ್ಯೆ ನುಸುಳಿ ಹರಿಯುವ ದೃಶ್ಯವು ಅತ್ಯಂತ ನಯನ ಮನೋಹರವಾಗಿದೆ. ಕಣ್ಣು ಹಾಯಿಸಿದಲ್ಲೆಲ್ಲಾ ಎತ್ತರತಗ್ಗುಗಳಿಂದ ಕೂಡಿದ ವಿಶಾಲ ಬೆಟ್ಟಗಳು ಕಾಣಿಸುತ್ತವೆ. ಮಣ್ಣಿನಿಂದ ನಿರ್ಮಿಸಿದ ಭಾರತದ ಅತ್ಯಂತ ದೊಡ್ಡ ಅಣೆಕಟ್ಟಾದ ಬಾಣಾಸುರ ಅಣೆಕಟ್ಟೂ ಇಲ್ಲಿದೆ. ವರ್ಣನೆಗೂ ನಿಲುಕದ ಈ ಸುಂದರ ದೃಶ್ಯಗಳನ್ನು ಕಂಡೇ ಆಸ್ವಾದಿಸಬೇಕು.

‘ಮೀನ್‌ಮುಟ್ಟಿ’ ಜಲಪಾತವು ವಯನಾಡಿನಲ್ಲಿರುವ ಜಲಪಾತಗಳಲ್ಲಿ ಅತ್ಯಂತ ದೊಡ್ಡದಾಗಿದೆ. ಮೂರು ತಟ್ಟುಗಳಾಗಿ ಧುಮ್ಮಿಕ್ಕುವ ಈ ಜಲಪಾತವನ್ನು ದೂರದಿಂದ ನೋಡುವಾಗ ‘ಮೇಲಿನಿಂದ ಸಕ್ಕರೆ ಸುರಿಯುತ್ತಿದೆಯೋ’ ಎಂಬಂತೆ ಭಾಸವಾಗುತ್ತದೆ. ಇಲ್ಲಿ ಪ್ರವಾಸಿಗರು ಧುಮುಕುವ ನೀರಿಗೆ ತಲೆಯೊಡ್ಡಿ ಮೈಮರೆಯುತ್ತಾರೆ.



‘ಕೇರಳಸಿಂಹ’ ಎಂದೇ ಪ್ರಸಿದ್ಧನಾದ ವೀರ ಪಳಶ್ಶಿರಾಜನು ವಯನಾಡಿನ ‘ಮಾವಿಲಂ ತೋಡು’ ಎಂಬಲ್ಲಿ ನಡೆದ ಯುದ್ಧದಲ್ಲಿ ಬ್ರಿಟಿಷರನ್ನೆದುರಿಸಿ ವೀರ ಮರಣವನ್ನಪ್ಪಿದನು. ಆತನ ಸ್ಮಾರಕ ವಯನಾಡಿನ ‘ಮಾನಂತವಾಡಿ’ಗೆ ಸಮೀಪದಲ್ಲಿದೆ. ನೆಲದಡಿಯಲ್ಲಿ ನಿರ್ಮಿಸಿದ ಒಂದು ವಸ್ತುಪ್ರದರ್ಶನಾಲಯವೂ ಇಲ್ಲಿದೆ.

ಸುಮಾರು 700 ವರ್ಷಗಳ ಹಿಂದೆ ನಿರ್ಮಾಣಗೊಂಡ ಜೈನ ದೇಗುಲವೂ ಇಲ್ಲಿದೆ. 300 ವರ್ಷಗಳ ಹಿಂದೆ ನಿರ್ಮಿಸಿದ ‘ಕೋರೋ’ ಮಸೀದಿಯಲ್ಲಿ ಈಗಲೂ ನಡೆಯುತ್ತಿರುವ ‘ಉರೂಸ್’ನಲ್ಲಿ ಜಾತಿಮತಗಳ ಭೇದವಿಲ್ಲದೆ ಸಾವಿರಾರು ಮಂದಿ ಪಾಲ್ಗೊಳ್ಳುತ್ತಾರೆ. 1905ರಲ್ಲಿ ನಿರ್ಮಿಸಿದ ‘ಪಳ್ಳಿಕುನ್ನು ಇಗರ್ಜಿ’ ಇಲ್ಲಿನ ಪ್ರಸಿದ್ಧ ಇಗರ್ಜಿಯಾಗಿದೆ. ಹಲವಾರು ಹಿಂದೂ ಆಚಾರಗಳನ್ನು ಪಾಲಿಸುವ ಈ ಇಗರ್ಜಿಯು ಇತರ ಇಗರ್ಜಿಗಳಿಗಿಂತ ಭಿನ್ನವಾಗಿದೆ.

ಇಷ್ಟೇ ಅಲ್ಲದೆ ಲಕ್ಕಿಡಿ, ಕುರುಂಬಾಲಪಟ್ಟಮಲೆ, ನೀಲಿಮಲೆ, ಕರ್ಲಾಡ ತಟಾಕ, ಫ್ಯಾಂಟಂ ರೋಕ್.... ಹೀಗೆ ಇನ್ನೂ ಹತ್ತು ಹಲವು ಪ್ರೇಕ್ಷಣೀಯ ಸ್ಥಳಗಳು ಈ ಜಿಲ್ಲೆಯಲ್ಲಿವೆ. ನಿಜವಾಗಿಯೂ ವಯನಾಡು ಪ್ರವಾಸಿಗಳ ಸ್ವರ್ಗವೇ ಅಲ್ಲವೇ!

– ಸಾಧಾರ

## ಚಟುವಟಿಕೆಗಳು

### ಪ್ರಶ್ನೆ ತಯಾರಿಸಿರಿ

- ಪಾಠದ ಪ್ರಧಾನ ಆಶಯಗಳು ಉತ್ತರವಾಗಿ ಬರುವಂತೆ ಸಾಧ್ಯವಿರುವಷ್ಟು ಪ್ರಶ್ನೆಗಳನ್ನು ತಯಾರಿಸಿರಿ.

### ವಾಕ್ಯ ರಚಿಸಿರಿ

- ಕೆಳಗೆ ಕೊಟ್ಟಿರುವ ತಖ್ತೆಯಲ್ಲಿರುವ ಪದಗಳನ್ನು ಉಪಯೋಗಿಸಿ ಸಾಧ್ಯವಿರುವಷ್ಟು ಅರ್ಥಪೂರ್ಣವಾದ ವಾಕ್ಯಗಳನ್ನು ರಚಿಸಿರಿ.

| | | |
|---|---|---|
| ನಾಗರತ್ನ | ಪರ್ವತ | ಹೊರಟಳು |
| ಗೋಪಾಲ | | ಏರಿದಳು |
| ರಾಣಿ | ನದಿ | ದಾಟಿದನು |
| ಸಫಿಯ | | ದಾಟಿದಳು |
| ರಾಜೇಶ | ಪ್ರವಾಸ | ಏರಿದನು |
| ಜೋನ್ | | ಹೊರಟನು |

### ಮನವಿಪತ್ರ ರಚಿಸಿರಿ

- ನಿಮ್ಮ ಶಾಲೆಯಿಂದ ವಯನಾಡಿನ ಬೇಗೂರು ವನ್ಯಮೃಗ ಸಂರಕ್ಷಣ ಕೇಂದ್ರಕ್ಕೆ ಶೈಕ್ಷಣಿಕ ಪ್ರವಾಸ ಕೈಗೊಳ್ಳಲು ತೀರ್ಮಾನಿಸಲಾಗಿದೆ ಎಂದು ಭಾವಿಸಿರಿ. ಅದಕ್ಕಾಗಿ ಅಲ್ಲಿನ ಅರಣ್ಯಾಧಿಕಾರಿಗಳ ಅನುಮತಿಗಾಗಿ ಒಂದು ಮನವಿಪತ್ರವನ್ನು ಬರೆಯಿರಿ.

### ಘೋಷಣವಾಕ್ಯ ರಚಿಸಿರಿ


- ಅರಣ್ಯನಾಶದಿಂದಾಗಿ ಅನೇಕ ವನ್ಯಮೃಗಗಳು ಆಹಾರ ಹಾಗೂ ವಾಸಸ್ಥಳದ ಕೊರತೆಯಿಂದ ವಂಶನಾಶಕ್ಕೆ ಒಳಗಾಗುತ್ತಿವೆ. ಅವುಗಳ ಸಂರಕ್ಷಣೆ ನಮ್ಮ ಕರ್ತವ್ಯವಲ್ಲವೇ? ಈ ಕುರಿತು ಜನಜಾಗೃತಿ ಮೂಡಿಸಲು ಅಗತ್ಯವಾದ ಘೋಷಣವಾಕ್ಯಗಳನ್ನು ರಚಿಸಿರಿ.

### ಸ್ಥಳ ಪರಿಚಯ ಬರೆಯಿರಿ

- ಈ ಲೇಖನದಲ್ಲಿ ನೀವು ವಯನಾಡಿನ ವಿವಿಧ ಸ್ಥಳಗಳ ವಿಶೇಷತೆಗಳನ್ನು ತಿಳಿದುಕೊಂಡಿರಲ್ಲವೇ? ನೀವು ಸಂದರ್ಶಿಸಿದ ಯಾವುದಾದರೂ ಒಂದು ಸ್ಥಳದ ಕುರಿತು ಸ್ಥಳ ಪರಿಚಯ ಬರೆಯಿರಿ.

## ಪದಬಂಧ ಪೂರ್ತಿಗೊಳಿಸಿರಿ

- ನೀಡಿದ ಸೂಚನೆಗಳ ಸಹಾಯದಿಂದ ಪದಬಂಧ ಪೂರ್ತಿಗೊಳಿಸಿರಿ.




**ಎಡದಿಂದ ಬಲಕ್ಕೆ**

1. ಗಗನದ ಮಾತು (5)
4. ತಂದೆಯನ್ನು ಹೀಗೂ ಹೇಳಬಹುದು (2)
5. ಅಧಿಕಾರವನ್ನು ಚಲಾಯಿಸುವವ (4)
7. ಅಜ್ಞಾನ ಹೋಗಿ ನನ್ನ ಉದಯವಾಯಿತು (4)

**ಮೇಲಿನಿಂದ ಕೆಳಗೆ**

2. ಸಭೆಯು ಇದರಂತೆ ನಡೆಯಬೇಕು. (4)
3. ನಾನು ಒಣಗಿದ ಎಲೆಯೇ (4)
4. ಸಮಯ ಬಂಧಿತ (3)
6. ನಾನು ಹಣ್ಣಾಗಲಿಲ್ಲ (2)
8. ಮಾಡುವ ಕ್ರಿಯೆ ಇದಾಗಿದೆ. (3)

# ನೀನಾರಿಗಾದೆಯೋ ಎಲೆ ಮಾನವ

ಇಟ್ಟರೆ ಸೆಗಣಿಯಾದೆ ತಟ್ಟಿದರೆ ಕುರುಳಾದೆ
ಸುಟ್ಟರೆ ನೊಸಲಿಗೆ ವಿಭೂತಿಯಾದೆ
ತಟ್ಟದೇ ಹಾಕಿದರೆ ಮೇಲು ಗೊಬ್ಬರವಾದೆ
ನೀನಾರಿಗಾದೆಯೋ ಎಲೆ ಮಾನವ

ಹಾಲಾದೆ ಕರೆದರೆ, ಮೊಸರಾದೆ ಹೆತ್ತರೆ
ಮೇಲೆ ಕೆನೆಗಡೆದರೆ ಬೆಣ್ಣೆಯಾದೆ
ಮೇಲಾದ ತುಪ್ಪವು ನಾನಾದೆ ಕಾಸಿದರೆ
ನೀನಾರಿಗಾದೆಯೋ ಎಲೆ ಮಾನವ

ಹಾದಿ ಬೀದಿಯಲಿರುವ ಕಸದ ಹುಲ್ಲನು ಮೇದು
ಬಂದು ಮನೆಗೆ ನಾನು ಅಮೃತವೀವೆ
ಅದನುಂಡು ನನಗೆರಡ ಬಗೆವ ಮಾನವ ನೀನು
ನೀನಾರಿಗಾದೆಯೋ ಎಲೆ ಮಾನವ

ಹಾಯೆ ಹರಿಗೋಲಾದೆ, ರಾಯ ಭೇರಿಗೆಯಾದೆ
ರಾಯರಾ ಕಾಲಿಗೆ ಮುಳ್ಕೊತ್ತು ಆದೆ
ಆಯವರಿತು ಹೊಡೆಯೆ ಮಧುರಗಾನಕ್ಕಾದೆ
ನೀನಾರಿಗಾದೆಯೋ ಎಲೆ ಮಾನವ

ಉಳುವೆ ನಾ ಭೂಮಿಯನು ಹೊರುವೆ ನಾ ಹೇರನ್ನು
ತುಳಿದು ಕಡ್ಡಿಯ ಕಾಳ ಬಿಂಗಡಿಸುವೆ!
ಕಳಪೆಯಾಗಿಹ ನೆಲವ ನಗುವ ತೋಪನು ಮಾಳ್ಪೆ!
ನೀನಾರಿಗಾದೆಯೋ ಎಲೆ ಮಾನವ

*ಎಸ್.ಜಿ. ನರಸಿಂಹಾಚಾರ್*



### ಎಸ್.ಜಿ. ನರಸಿಂಹಾಚಾರ್



ಎಸ್.ಜಿ.ನರಸಿಂಹಾಚಾರ್ಯರು 1862 ಸೆಪ್ಟಂಬರ್ 11ರಂದು ಮೈಸೂರು ಜಿಲ್ಲೆಯ ಶ್ರೀರಂಗಪಟ್ಟಣದಲ್ಲಿ ಜನಿಸಿದರು. ತಂದೆ ಅಳಸಿಂಗಾಚಾರ್ಯರು, ತಾಯಿ ಸೀತಮ್ಮ. ಬಿ.ಎ. ಪದವೀಧರರಾದ ಇವರು ಮೈಸೂರು ಸರಕಾರದ ಶಿಕ್ಷಣ ಇಲಾಖೆಯಲ್ಲಿ ಶಿಕ್ಷಕರಾಗಿಯೂ ಕನ್ನಡ ಭಾಷಾಂತರಕಾರರಾಗಿಯೂ ಇಪ್ಪತ್ತು ವರ್ಷಗಳ ಕಾಲ ಸೇವೆ ಸಲ್ಲಿಸಿದ್ದಾರೆ. ಗೋವಿನ ಬಾಳು, ಹೊಗೆಯಗಾಡಿ ಮುಂತಾದ ಪ್ರಸಿದ್ಧ ಕವಿತೆಗಳನ್ನು ರಚಿಸಿದ್ದಾರೆ. ಇವರು 1907 ಡಿಸೆಂಬರ್ 22ರಂದು ತಮ್ಮ 45ನೇ ವಯಸ್ಸಿನಲ್ಲಿ ನಿಧನರಾದರು.

## ಚಟುವಟಿಕೆಗಳು

### ಹಾಡಿರಿ

- ಈ ಕವಿತೆಯನ್ನು ರಾಗವಾಗಿ ಹಾಡಿರಿ.

### ಉತ್ತರಿಸಿರಿ

- ಈ ಕವಿತೆಯಲ್ಲಿ ಸೆಗಣಿಯ ಉಪಯೋಗದ ಬಗ್ಗೆ ಕವಿಯು ಏನು ಹೇಳಿದ್ದಾರೆ?
- ಹಾಲಿನಿಂದ ತುಪ್ಪ ತಯಾರಾಗುವುದು ಹೇಗೆ?
- ದನ, ಎತ್ತುಗಳಿಂದ ಇರುವ ಪ್ರಯೋಜನಗಳೇನು?

### ಸಾಲುಗಳನ್ನು ಗುರುತಿಸಿರಿ

- ಕೆಳಗೆ ನೀಡಲಾದ ಆಶಯಗಳಿರುವ ಸಾಲುಗಳನ್ನು ಪದ್ಯದಿಂದ ಆರಿಸಿ ಬರೆಯಿರಿ.
- ದನವು ಕಸಹುಲ್ಲುಗಳನ್ನು ತಿಂದು ನಮಗೆ ಅಮೃತವನ್ನು ನೀಡುತ್ತದೆ.
- ಭೂಮಿಯನ್ನು ಉತ್ತು, ಹೊರೆಯನ್ನು ಹೊತ್ತು ಶ್ರಮಪಟ್ಟು ದುಡಿಯುತ್ತೇನೆ.

### ಆಶಯ ಬರೆಯಿರಿ

- ನೀನಾರಿಗಾದೆಯೋ ಎಲೆ ಮಾನವ ಕವಿತೆಯ ಆಶಯವನ್ನು ನಿಮ್ಮ ಮಾತುಗಳಲ್ಲಿ ಬರೆಯಿರಿ.

## ಪ್ರಬಂಧ ರಚಿಸಿರಿ

- ಅನಾದಿ ಕಾಲದಿಂದಲೇ ಮಾನವನು ಪ್ರಾಣಿಗಳನ್ನು ಸಾಕಲು ತೊಡಗಿದ್ದನು. ಅವುಗಳನ್ನು ಪಳಗಿಸಿ ಸಾಕಷ್ಟು ಪ್ರಯೋಜನಗಳನ್ನು ಪಡೆಯುತ್ತಿದ್ದನು ಎಂಬುದನ್ನು ತಿಳಿದಿರಲ್ಲವೇ. ಸಾಕುಪ್ರಾಣಿಗಳ ಬಗ್ಗೆ ಪ್ರಬಂಧ ರಚಿಸಿರಿ.

## ಪ್ರಾಸಪದಗಳನ್ನು ಬರೆಯಿರಿ


- ಕವಿತೆಯಲ್ಲಿ ಬರುವ ಆದಿಪ್ರಾಸ ಪದಗಳನ್ನು ಗುರುತಿಸಿ ಬರೆಯಿರಿ.

## ಅಭಿಪ್ರಾಯ ಟಿಪ್ಪಣಿ ಬರೆಯಿರಿ

- ಈ ಹಾಡಿನಲ್ಲಿರುವ 'ಕಳಪೆಯಾಗಿಹ ನೆಲವ ನಗುವ ತೋಪನು ಮಾಳ್ಪೆ!' ಎಂಬ ಸಾಲಿನ ಬಗ್ಗೆ ನಿಮ್ಮ ಅಭಿಪ್ರಾಯವನ್ನು ಬರೆದು ಮಂಡಿಸಿರಿ.

## ಪದಸೂರ್ಯ ರಚಿಸಿರಿ

- ಕೆಳಗೆ ಕೊಟ್ಟಿರುವ ಪದದ ಪರ್ಯಾಯ ಪದಗಳನ್ನು ಉಪಯೋಗಿಸಿಕೊಂಡು ಪದಸೂರ್ಯ ರಚಿಸಿರಿ.



## ಕಲಿಕಾ ಸಾಧನೆಗಳು

- ಆಲಿಸಿ ಓದಿ ತಿಳಿದ ವಿಚಾರಗಳನ್ನು ತರ್ಕಬದ್ಧವಾಗಿ ವಿಶ್ಲೇಷಿಸಿ ಸ್ವಂತ ಅಭಿಪ್ರಾಯಗಳನ್ನು ವಾಚಿಕವಾಗಿ ಮತ್ತು ಲಿಖಿತವಾಗಿ ಪ್ರಕಟಿಸುವುದು.
- ಗದ್ಯ-ಪದ್ಯಗಳನ್ನು ಆಶಯ ಸ್ಪಷ್ಟತೆಯೊಂದಿಗೆ ನಿರರ್ಗಳವಾಗಿ ಮತ್ತು ಸ್ಫುಟತೆಯೊಂದಿಗೆ ಓದುವುದು ಮತ್ತು ಪ್ರಧಾನ ಆಶಯಗಳನ್ನು ಬಾಯ್ದೆರೆಯಾಗಿ ಮಂಡಿಸುವುದು.
- ಜನಪದಗೀತೆ, ಕವಿತೆಗಳ ರಾಗ, ತಾಳ, ಭಾವ ಎಂಬಿವುಗಳನ್ನು ಆಸ್ವಾದಿಸುವುದು, ತಾಳದೊಂದಿಗೆ ಭಾವನಾತ್ಮಕವಾಗಿ ಹಾಡಿ ಮಂಡಿಸುವುದು. ಕಂಠಪಾಠ ಮಾಡುವುದು.
- ಸ್ವಂತ ಅಭಿರುಚಿಗೆ ತಕ್ಕಂತೆ ಕಥೆ, ಕವಿತೆ, ನಾಟಕ, ಪ್ರವಾಸಕಥನ ಮೊದಲಾದ ವಿಭಿನ್ನ ವಿಭಾಗಗಳಲ್ಲಿ ಒಳಗೊಂಡ ಪುಸ್ತಕಗಳನ್ನು ಗುರುತಿಸಿ ಓದುವುದು ಮತ್ತು ಓದಿ ತಿಳಿದ ವಿಚಾರಗಳನ್ನು ವಿವಿಧ ರೀತಿಯಲ್ಲಿ ಪ್ರಕಟಪಡಿಸುವುದು.
- ಪರಿಚಿತವಾದ ವಿಷಯಗಳನ್ನು ವಸ್ತುವಾಗಿರಿಸಿಕೊಂಡು ಕಥೆ, ಕವಿತೆ ಮೊದಲಾದ ಸೃಜನಾತ್ಮಕ ರಚನೆಗಳನ್ನು ಮಾಡುವುದು.
- ನೀಡಿದ ಸಂದರ್ಭಕ್ಕೆ ಸೂಕ್ತವಾದ ವ್ಯವಹಾರ ರೂಪಗಳನ್ನು ಕಂಡುಕೊಂಡು ರಚನೆಗಳನ್ನು ಮಾಡುವುದು.
- ವಿಭಿನ್ನ ರೀತಿಯ ವ್ಯವಹಾರ ರೂಪಗಳನ್ನು ತಯಾರಿಸುವುದು. ಅವುಗಳನ್ನು ಸಂಚಿಕೆ, ಭಿತ್ತಿಪತ್ರಿಕೆ, ಹಸ್ತಪತ್ರಿಕೆ, ನಿಯತಕಾಲಿಕಗಳಲ್ಲಿ ಪ್ರಕಟಿಸುವುದು.
- ಸೃಜನಾತ್ಮಕ ರಚನೆಗಳನ್ನು ಓದಿ, ಅವುಗಳ ಪ್ರಧಾನ ಆಶಯ ಕೆಡದಂತೆ ಸಂಕ್ಷಿಪ್ತವಾಗಿ ಬರೆಯುವುದು.
- ಕೃತಿಯ ಕಥಾಪಾತ್ರಗಳು, ಸನ್ನಿವೇಶಗಳು, ಭಾಷಾಶೈಲಿ, ಮಂಡನೆಯ ರೀತಿ ಎಂಬಿತ್ಯಾದಿಗಳನ್ನು ಪರಿಗಣಿಸಿ ಓದಿದ ಕೃತಿಯ ಆಸ್ವಾದನಾ ಟಿಪ್ಪಣಿ ತಯಾರಿಸುವುದು.
- ವಿವಿಧ ಕವಿತೆಗಳನ್ನು ಕಂಠಪಾಠ ಮಾಡಿ ಸೂಕ್ತವಾದ ರಾಗ, ತಾಳಗಳೊಂದಿಗೆ ಭಾವಪೂರ್ಣವಾಗಿ ಹಾಡುವುದು.
- ಪದಶುದ್ಧಿ, ವಾಕ್ಯಶುದ್ಧಿ, ಲೇಖನಚಿಹ್ನೆ ಮೊದಲಾದ ಬರವಣಿಗೆಗೆ ಅಗತ್ಯವಾದ ಅಂಶಗಳನ್ನೊಳಗೊಂಡು ಮಾಡಿದ ರಚನೆಗಳ ಮೌಲ್ಯನಿರ್ಣಯ ಮಾಡುವುದರೊಂದಿಗೆ ಉತ್ತಮಗೊಳಿಸುವುದು.
- ಪಾಠಭಾಗದಲ್ಲಿರುವ ಪದಗಳನ್ನು ಅರ್ಥವ್ಯತ್ಯಾಸವಿಲ್ಲದೆ ವಿಂಗಡಿಸಿ ಬರೆಯುವುದು ಮತ್ತು ಸೇರಿಸಿ ಬರೆಯುವ ಚಟುವಟಿಕೆಯಲ್ಲಿ ತೊಡಗುವುದು.
- ಸ್ವಂತ ಆಶಯಗಳನ್ನು ಶಿಷ್ಟಭಾಷೆಯಲ್ಲಿ ತಪ್ಪಿಲ್ಲದೆ ಬರೆಯುವುದು.
- ಓದಿದ ವಿಚಾರಗಳನ್ನು ವಿಶ್ಲೇಷಿಸಿ ತನ್ನ ಅಭಿಪ್ರಾಯಗಳನ್ನು ಭಾಷಣ, ಪ್ರಬಂಧ ಮತ್ತು ಚರ್ಚೆಗಳ ಮೂಲಕ ಮಂಡಿಸುವುದು.
- ಪರಿಚಿತವಾದ ಕವಿತೆಗಳಲ್ಲಿರುವ ಬಿಂಬಕಲ್ಪನೆ, ವರ್ಣನೆ ಎಂಬಿವುಗಳನ್ನು ಗುರುತಿಸುವುದು ಮತ್ತು ವಾಚಿಕವಾಗಿ ಮಂಡಿಸುವುದು.
- ದೃಶ್ಯ-ಶ್ರಾವ್ಯ ಮಾಧ್ಯಮಗಳ ಮೂಲಕ ಗಳಿಸಿದ ವಿಚಾರಗಳನ್ನು ತನ್ನ ರಚನೆಯಲ್ಲಿ ಬಳಸುವುದು.

## 2

# ಒಂದಾಗಿ ಬಾಳೋಣ

ನಮ್ಮ ದೇಶದಲ್ಲಿ ಅದೆಷ್ಟೋ ಮಂದಿ ವೀರರು ಮಾತೃಭೂಮಿಯ ರಕ್ಷಣೆಗಾಗಿ ಹೋರಾಟ ಮಾಡಿದ್ದಾರೆ. ಪ್ರಾಚೀನ ಕಾಲದಿಂದಲೇ ಭಾರತವು ಜಗತ್ತಿನಲ್ಲಿ ಹಿರಿದಾದ ಸ್ಥಾನಮಾನಗಳನ್ನು ಪಡೆದುಕೊಂಡಿದೆ. ಸಾಂಸ್ಕೃತಿಕ ಹಿರಿಮೆ, ಮನೋವೈಶಾಲ್ಯ, ವೈವಿಧ್ಯತೆಯಲ್ಲೂ ಏಕತೆಯನ್ನು ಕಾಣಲು ಇಲ್ಲಿ ಸಾಧ್ಯವಾಗುತ್ತದೆ. ಈ ಐಕ್ಯವನ್ನು ಉಳಿಸಬೇಕಾದುದು ನಮ್ಮೆಲ್ಲರ ಕರ್ತವ್ಯವಾಗಿದೆ. 'ದೇಶ ಸೇವೆಯೇ ಈಶ ಸೇವೆ' ಎಂಬ ಭಾವನೆಯನ್ನು ತಳೆದು ಮಾತೃಭೂಮಿಯ ಸೇವೆಗಾಗಿ ನಮ್ಮ ಬದುಕನ್ನು ಮುಡಿಪಾಗಿಡೋಣ.



## ಕೆಚ್ಚಿನ ಕಿಡಿ

ಮೋರೋಪಂತ್ ಹಾಗೂ ಭಾಗೀರಥಿಬಾಯಿ ದಂಪತಿಗಳ ಪುತ್ರಿಯಾಗಿ 1835 ನವೆಂಬರ್19ರಂದು ಲಕ್ಷ್ಮೀಬಾಯಿಯು ಜನಿಸಿದಳು. ಚಿಕ್ಕವಳಿದ್ದಾಗ 'ಮನೂ' ಎಂಬ ಹೆಸರಿನಿಂದ ಇವಳು ಎಲ್ಲರಿಗೂ ಪ್ರಿಯಳಾಗಿದ್ದಳು. ಮನೂ ನಾಲ್ಕು ವರ್ಷದವಳಿದ್ದಾಗ ಅವಳ ತಾಯಿ ಮರಣಹೊಂದಿದರು. ಮೋರೋಪಂತರು ಮನೂವಿನ ತಾಯಿಯೂ ತಂದೆಯೂ ಆಗಿ ಅವಳನ್ನು ಬೆಳೆಸಿದರು.

ಬಾಲಕಿ ಮನೂವಿಗೆ ಪುರುಷರಂತೆ ಆನೆ ಸವಾರಿ, ಕುದುರೆ ಸವಾರಿ, ಕತ್ತಿ ವರಸೆ, ಬಂದೂಕಿನ ಗುರಿಸಾಧನೆಯಲ್ಲಿ ಬಹಳ ಆಸಕ್ತಿಯಿತ್ತು. ಮೊರೋಪಂತರು ತಮ್ಮ ಪ್ರೀತಿಯ ಮಗಳ ಶಿಕ್ಷಣಕ್ಕೆ ಬೇಕಾದ ಸಕಲ ಏರ್ಪಾಡುಗಳನ್ನು ಮಾಡಿದರು. ಆದುದರಿಂದ ಲಕ್ಷ್ಮೀಬಾಯಿಯು ಗಂಡಸರನ್ನೂ ಮೀರಿಸುವಂತೆ ಸಕಲ ವಿದ್ಯೆಗಳಲ್ಲೂ ಪಾರಂಗತಳಾದಳು.

ಒಂದು ಬಾರಿ ಮನೂ ಮರಾಠಾ ರಾಜ್ಯದ ಪೇಶ್ವೆಯಾದ ಬಾಜೀರಾಯನ ದತ್ತುಪುತ್ರ ನಾನಾಸಾಹೇಬ್ ಮತ್ತು ತಮ್ಮನಾದ ರಾವ್‌ಸಾಹೇಬರೊಂದಿಗೆ ಕುದುರೆ ಸವಾರಿ ಮಾಡುತ್ತಿದ್ದಳು. ಅವರಲ್ಲಿ ಸ್ಪರ್ಧೆಯುಂಟಾಯಿತು. ಇಬ್ಬರು ಯುವಕರೂ ವೇಗವಾಗಿ ಕುದುರೆಯನ್ನು ದೌಡಾಯಿಸುತ್ತಿದ್ದರು. ಆದರೆ ಪುಟ್ಟ ಮನೂ ಇನ್ನಷ್ಟು ವೇಗದಿಂದ ತನ್ನ ಕುದುರೆಯನ್ನು ಓಡಿಸಿ ಅವರನ್ನು ಹಿಂದೆಹಾಕಿದಳು. ಅವರು ಬಿಡುವರೇ? ಈ ಪುಟಾಣಿಯನ್ನು ಸೋಲಿಸಲು ಒಬ್ಬ ಇನ್ನಷ್ಟು ವೇಗ ಹೆಚ್ಚಿಸಿದನು. ಆದರೆ ಹಿಂದೆ ಉಳಿದ ಮತ್ತೊಬ್ಬ ಕುದುರೆ ಮುಗ್ಗರಿಸಿ ಕೆಳಗೆ ಬಿದ್ದೇಬಿಟ್ಟ. “ಅಯ್ಯೋ ನಾನು ಸತ್ತೆ” ಎಂಬ ದನಿ ಕೇಳಿ ಬಾಲಕಿ ಕುದುರೆಯನ್ನು ಹಿಂದಕ್ಕೆ ತಿರುಗಿಸಿದಳು. ಅವಳು ಮತ್ತೊಬ್ಬ ಯುವಕನ ಸಹಾಯದಿಂದ ಬಿದ್ದು ಗಾಯಗೊಂಡ ಯುವಕನನ್ನು ಎತ್ತಿ ತನ್ನ ಕುದುರೆಯ ಮೇಲೆ ಕುಳ್ಳಿರಿಸಿಕೊಂಡು ಅರಮನೆಗೆ ಹಿಂತಿರುಗಿದಳು. ಅರಮನೆಯಲ್ಲಿ ಮೋರೋಪಂತ ಮಗಳನ್ನುದ್ದೇಶಿಸಿ “ಮನೂ, ಎಷ್ಟು ಅನ್ಯಾಯವಾಯಿತಮ್ಮ! ನಾನಾ ತುಂಬಾ ಗಾಯಗೊಂಡಿದ್ದಾನೆ” ಎಂದನು.

“ಏನಿಲ್ಲಪ್ಪ, ಸ್ವಲ್ಪ ಗಾಯ ಅಷ್ಟೇ. ಹಿಂದೆ ಅಭಿಮನ್ಯು ಇದಕ್ಕೂ ಹೆಚ್ಚು ಗಾಯಗೊಂಡು ಹೋರಾಡಲಿಲ್ಲವೇ?”

“ಆ ಕಾಲವೇ ಬೇರೆ ಮನೂ”

“ಏಕೆ ಬೇರೆ ಅಪ್ಪಾಜಿ? ಅದೇ ಆಕಾಶವಿದೆ. ಅದೇ ಭೂಮಿ ಇದೆ. ಸೂರ್ಯಚಂದ್ರರೂ ಅಷ್ಟೇ” ಎಂದು ಮಗಳು ಉತ್ತರಿಸಿದಳು.

ಮನೂ ಬೆಳೆದು ದೊಡ್ಡವಳಾದಳು. ಝಾನ್ಸಿ ರಾಜ್ಯದ ರಾಜ ಗಂಗಾಧರರಾಯನ ಧರ್ಮಪತ್ನಿಯಾಗಿ ಮನೂ ಲಕ್ಷ್ಮೀಬಾಯಿ ಎನಿಸಿಕೊಂಡಳು. ಎಲ್ಲಾ ವಿಚಾರಗಳಲ್ಲೂ ಚತುರೆಯಾಗಿದ್ದ ಲಕ್ಷ್ಮೀಬಾಯಿಯು ತನ್ನ ಪತಿಯೊಂದಿಗೆ ರಾಜಕಾರ್ಯಗಳಲ್ಲಿ ಗಮನವಿರಿಸಿದಳು. ಪ್ರಜೆಗಳ ಕ್ಷೇಮಕ್ಕೆ ಬೇಕಾದ ಎಲ್ಲಾ ವ್ಯವಸ್ಥೆಗಳನ್ನು ಗಂಡನಿಗೆ ಕಾಲಾನುಕಾಲಕ್ಕೆ ತಿಳಿಸಿ ಮಾಡಿಸುತ್ತಿದ್ದಳು. ಪರಿಣಾಮವಾಗಿ ರಾಜ್ಯದಲ್ಲಿ ಶಾಂತಿ ನೆಲೆಸಿ ಜನರು ನೆಮ್ಮದಿಯಿಂದ ಬಾಳುತ್ತಿದ್ದರು.

ಲಕ್ಷ್ಮೀಬಾಯಿಯು ಎಲ್ಲಾ ರೀತಿಯಲ್ಲಿ ಗಂಗಾಧರರಾಯನಿಗೆ ತಕ್ಕ ಪತ್ನಿಯಾಗಿದ್ದಳು.

ಆದರೆ ದುರಂತಗಳು ಒಂದರ ಹಿಂದೆ ಒಂದರಂತೆ ಲಕ್ಷ್ಮೀಬಾಯಿಯನ್ನು ಬೆನ್ನಟ್ಟಿ ಬಂದವು. ಲಕ್ಷ್ಮೀಬಾಯಿಯು ಗಂಡು ಮಗುವೊಂದನ್ನು ಹೆತ್ತಳು. ದುರ್ದೈವವಶಾತ್ ಹುಟ್ಟಿದ ಮೂರೇ ತಿಂಗಳಲ್ಲಿ ಆ ಮಗು ಮರಣಹೊಂದಿತು. ಸತಿಪತಿಗಳಿಬ್ಬರೂ ಅತೀವ ದುಃಖಿತರಾದರು. ಸ್ವಲ್ಪ ದಿನಗಳ ಬಳಿಕ ಗಂಗಾಧರರಾಯನೂ ಮರಣಹೊಂದಿದನು. ಮರಣ ಶಯ್ಯೆಯಲ್ಲಿರುವಾಗ ಆತನು ತನ್ನ ಸಂಬಂಧಿಕರೊಬ್ಬರ ಮಗನಾದ ದಾಮೋದರರಾಯನೆಂಬ ಚಿಕ್ಕ ಬಾಲಕನೊಬ್ಬನನ್ನು ದತ್ತು ತೆಗೆದುಕೊಂಡಿದ್ದನು.

ಬ್ರಿಟಿಷ್ ದೊರೆ ಡಾಲ್‌ಹೌಸಿಯು ರಾಜ್ಯವನ್ನು ಕಬಳಿಸಲು ಆಲೋಚಿಸುತ್ತಾ ಇದ್ದನು. ಗಂಗಾಧರರಾಯನು ಮರಣಹೊಂದಿದುದು ಅವನಿಗೆ ಸಂಪದ್ಭರಿತವಾದ ಝಾನ್ಸಿಯನ್ನು ಕಬಳಿಸಲು ಸಹಕಾರಿಯಾಯಿತು. 'ದತ್ತು ಸ್ವೀಕಾರದ ಹಕ್ಕನ್ನು ಕಂಪೆನಿಯು ಒಪ್ಪುವುದಿಲ್ಲ. ಝಾನ್ಸಿಯನ್ನು ಇಂಗ್ಲಿಷ್ ರಾಜ್ಯದಲ್ಲಿ ವಿಲೀನಗೊಳಿಸಲು ನಿರ್ಧರಿಸಲಾಗಿದೆ'–ಎಂದು ಡಾಲ್‌ಹೌಸಿಯು ಝಾನ್ಸಿರಾಣಿಗೆ ಆದೇಶ ಕಳುಹಿಸಿದನು.

ರಾಣಿಗೆ ಇದನ್ನು ನಂಬಲಾಗಲಿಲ್ಲ. ಕ್ಷಣ ಹೊತ್ತು ದಿಗ್ಭ್ರಾಂತಗೊಂಡ ರಾಣಿಯು, "ಇಲ್ಲ, ಸಾಧ್ಯವಿಲ್ಲ. ನಾನು ಝಾನ್ಸಿಯನ್ನು ಬಿಟ್ಟುಕೊಡಲಾರೆ" ಎಂದು ಉದ್ಗರಿಸಿದಳು. ಒಮ್ಮೆಲೇ ಸೆಟೆದು ನಿಲ್ಲುವುದು ಅಷ್ಟು ಸುಲಭವಲ್ಲವೆಂದು



ರಾಣಿ ತಿಳಿದಿದ್ದಳು. ಆತುರದಿಂದ ಅಪಾಯ ಖಂಡಿತವೆಂದು ಅವಳಿಗೆ ತಿಳಿದಿತ್ತು. 'ಸೇನೆ ಸಜ್ಜುಗೊಳಿಸಬೇಕು ಮತ್ತು ಯುದ್ಧ ಕಾಲದಲ್ಲಿ ಲೂಟಿ ದರೋಡೆಗಳಿಗೆ ಅವಕಾಶವಿಲ್ಲದಂತೆ ನೋಡಬೇಕು' ಎಂದು ಯೋಚಿಸಿದಳು. ನಾನಾಸಾಹೇಬ್, ತಾತ್ಯಾಟೋಪಿ, ರಘುನಾಥಸಿಂಹ ಮುಂತಾದ ಸ್ವಾತಂತ್ರ್ಯಪ್ರಿಯರು ರಾಣಿಗೆ ಬೆಂಬಲವಾಗಿದ್ದರು.

ಮಹಾರಾಣಿ ಯುದ್ಧವಿದ್ಯೆಯ ಅಭ್ಯಾಸವನ್ನು ಮುಂದುವರಿಸಿದಳು. ರಹಸ್ಯವಾಗಿ ಎಲ್ಲರನ್ನೂ ಸಂಧಿಸಿ ಸೈನ್ಯವನ್ನು ಸಜ್ಜುಗೊಳಿಸುತ್ತಲೇ ಇದ್ದಳು. ಹೊಸ ಶಸ್ತ್ರಗಳು ಸಿದ್ಧವಾಗತೊಡಗಿದುವು. ರಾಣಿ ಹಾಗೂ ಸಂಗಡಿಗರು ಸೈನ್ಯವನ್ನು ಬಲಪಡಿಸುತ್ತಲೇ ಬಂದರು. ಹೋರಾಟಕ್ಕೆ ಎಲ್ಲರೂ ಸಿದ್ಧರಾದರು.

ಯುದ್ಧ ಆರಂಭವಾಯಿತು. ಇಂಗ್ಲಿಷರ ಸೈನ್ಯ ಝಾನ್ಸಿ ನಗರವನ್ನು ಪ್ರವೇಶಿಸಿತು. ರಾಣಿಯೇ ಸ್ವಯಂ ಶಸ್ತ್ರಧರಿಸಿದಳು. 1858 ಮಾರ್ಚ್ 23ರಿಂದ ಆರಂಭವಾದ ಯುದ್ಧವು 10–12 ದಿನಗಳವರೆಗೆ ಸೋಲುಗೆಲುವುಗಳ ನೆರಳು–ಬೆಳಕಿನಲ್ಲಿ ಮುಂದುವರಿಯಿತು. ರಾಣಿಯು ಪುರುಷವೇಷ ಧರಿಸಿ ರಣಚಂಡಿಯಂತೆ ಸೆಣಸಿದಳು. ಅವಳ ಕೆಚ್ಚಿನ ಕಾದಾಟವು ಬ್ರಿಟಿಷ್ ಸೇನಾಧಿಪತಿ ಹ್ಯೂರೋಸನ್ನು ಕೂಡ ಬೆರಗುಗೊಳಿಸಿತು. ಆದರೆ ಬ್ರಿಟಿಷರ ಬೃಹತ್ ಸೈನ್ಯದ ಮುಂದೆ ಅವಳಿಗೆ ಹೆಚ್ಚು ಹೊತ್ತು ಹೋರಾಡಲಾಗಲಿಲ್ಲ. ಅಲ್ಲಿಂದ ಹೊರಟ ರಾಣಿಯು ಕಾಲಪಿಗೆ ತಲುಪಿದಳು. ಅಲ್ಲಿ ರಾವ್‌ಸಾಹೇಬ್, ತಾತ್ಯಾಟೋಪಿ ಮತ್ತು ಬಾಂದಾ ನವಾಬರು ಸಮಾಲೋಚನೆ ನಡೆಸಿ ಗ್ವಾಲಿಯರ್ ಕೋಟೆಯಲ್ಲಿ ಸೇರಲು ತೀರ್ಮಾನಿಸಿದರು. ಅಂತೆಯೇ ಎಲ್ಲರೂ ತಮ್ಮ ಸೈನ್ಯಗಳೊಂದಿಗೆ ಗ್ವಾಲಿಯರ್ ತಲುಪಿದರು.

ಯುದ್ಧ ಜೋರಾಗಿ ನಡೆಯುತ್ತಿತ್ತು. ರಕ್ತದ ಓಕುಳಿ ಹರಿಯುತ್ತಿತ್ತು. ಕತ್ತಲಾಗುವುದಕ್ಕೆ ಸ್ವಲ್ಪ ಸಮಯ ಬಾಕಿಯಿತ್ತು. ನೂರಾರು ಸೈನಿಕರನ್ನು ರಾಣಿ ಈಗಾಗಲೇ ಸಂಹರಿಸಿದ್ದಳು. ಅತ್ಯಂತ ಸಮೀಪಕ್ಕೆ ಬಂದ ಬ್ರಿಟಿಷ್ ಸೈನಿಕನೊಬ್ಬ ರಾಣಿಯ ಎದೆಗೆ ಗುರಿಯಿಟ್ಟು ಚೂರಿಯನ್ನೆಸೆದನು. ರಾಣಿಯ ಬೆಂಗಾವಲಾಗಿದ್ದ ಗುಲ್‌ಮಹಮ್ಮದ್, ರಾಮಚಂದ್ರ ರಾವ್, ರಘುನಾಥ ಸಿಂಹ ಮೊದಲಾದವರು ಸೇರಿ ಗಾಯಗೊಂಡು ತತ್ತರಿಸುತ್ತಿದ್ದ ರಾಣಿಯನ್ನು ಕುದುರೆಯ ಮೇಲೆ ಕೂರಿಸಿ, ಬಾಬಾ ಗಂಗಾದಾಸರ ಕುಟೀರವನ್ನು ತಲುಪಿದರು. ಆ ಇರುಳಿನಲ್ಲಿ ಬಾಬಾ ಗಂಗಾದಾಸ್ ರಾಣಿಯ ರಕ್ತಮಯ ದೇಹವನ್ನು ಗುರುತಿಸಿದರು. ತಣ್ಣೀರಿನಲ್ಲಿ ಆಕೆಯ ಮುಖ ತೊಳೆದರು. ಸ್ವಲ್ಪ ನೀರನ್ನು ಕುಡಿಸಿದರು. ಒಮ್ಮೆ ಕಣ್ತೆರೆದ ರಾಣಿ ಅಸ್ಪಷ್ಟವಾಗಿ ದೇವರ ನಾಮ ಉಚ್ಚರಿಸುತ್ತಾ ಕಣ್ಣುಮುಚ್ಚಿದಳು.

ಅಲ್ಲಿ ನಿಂತಿದ್ದ ಗುಲ್‌ಮಹಮ್ಮದ್, ರಘುನಾಥ ಸಿಂಹ, ದಾಮೋದರ ರಾವ್ ಮುಂತಾದವರು ಬಿಕ್ಕಿಬಿಕ್ಕಿ ಅತ್ತರು. ಆಗ ಬಾಬಾ ಗಂಗಾದಾಸ್ ಗಂಭೀರವಾಣಿಯಿಂದ "ಪ್ರಕಾಶಕ್ಕೆ ಕೊನೆಯಿಲ್ಲ. ಅದು ಪ್ರತಿ ಕಣದಲ್ಲೂ ಅಡಗಿರುತ್ತದೆ. ಕಾಲ ಬಂದಾಗ ಅದು ಮತ್ತೆ ಪ್ರಜ್ವಲಿಸುತ್ತದೆ"ಎಂಬುದಾಗಿ ಅವರನ್ನು ಸಂತೈಸಿದರು.

ಕೇವಲ 22 ವರ್ಷಗಳ ಜೀವನಾವಧಿಯಲ್ಲಿ ತನ್ನ ನಾಡಿಗಾಗಿ ಕೆಚ್ಚಿನಿಂದ ಕಾದಾಡಿ, ಕಾರ್ಗತ್ತಲಿನಲ್ಲಿ ಕಣ್ಣು ಕೋರೈಸುವ ಮಿಂಚಿನಂತೆ ಬೆಳಗಿ ಝಾನ್ಸಿರಾಣಿ ಕಣ್ಮರೆಯಾದಳು. ಆಕೆಯ ಶೌರ್ಯ, ಸಾಹಸ, ಅಚಲ ದೇಶಪ್ರೇಮ ಸದಾಕಾಲ ಅವಿಸ್ಮರಣೀಯ ಹಾಗೂ ಅನುಕರಣೀಯ.

## ಚಟುವಟಿಕೆಗಳು

### ಚರ್ಚಿಸಿರಿ

"ಪ್ರಕಾಶಕ್ಕೆ ಕೊನೆಯಿಲ್ಲ. ಅದು ಪ್ರತಿ ಕಣದಲ್ಲೂ ಅಡಗಿರುತ್ತದೆ. ಕಾಲ ಬಂದಾಗ ಅದು ಮತ್ತೆ ಪ್ರಜ್ವಲಿಸುತ್ತದೆ" ಬಾಬಾ ಗಂಗಾದಾಸರ ಈ ಮಾತಿನ ಬಗ್ಗೆ ಚರ್ಚಿಸಿರಿ.

### ಉತ್ತರಿಸಿರಿ

- ಝಾನ್ಸಿ ರಾಣಿಯ ಬಾಲ್ಯದ ಹೆಸರು ಏನಾಗಿತ್ತು?
- ಝಾನ್ಸಿ ರಾಣಿಯು ಯಾವ ಯಾವ ಯುದ್ಧ ವಿದ್ಯೆಗಳಲ್ಲಿ ಪಾರಂಗತಳಾಗಿದ್ದಳು?
- ನಾನಾ ಸಾಹೇಬ್ ಮತ್ತು ಮನೂವಿನ ಕುದುರೆ ಸವಾರಿಯ ಘಟನೆಯನ್ನು ಬರೆಯಿರಿ.

### ಸಂದರ್ಭ ತಿಳಿಸಿರಿ

- "ಮನೂ, ಎಷ್ಟು ಅನ್ಯಾಯವಾಯಿತಮ್ಮ! ನಾನಾ ತುಂಬಾ ಗಾಯಗೊಂಡಿದ್ದಾನೆ"
- "ಇಲ್ಲ  ಸಾಧ್ಯವಿಲ್ಲ. ನಾನು ಝಾನ್ಸಿಯನ್ನು ಬಿಟ್ಟುಕೊಡಲಾರೆ "

### ಊಹಿಸಿ ಬರೆಯಿರಿ

- ದತ್ತು ಸ್ವೀಕಾರದ ಹಕ್ಕನ್ನು ಬ್ರಿಟಿಷರು ಒಪ್ಪುತ್ತಿದ್ದರೆ ಏನಾಗುತ್ತಿತ್ತು?

### ಘೋಷಣೆ ಬರೆಯಿರಿ

- ದೇಶಪ್ರೇಮವನ್ನು ಸಾರುವ ಘೋಷಣೆಗಳನ್ನು ಬರೆದು ತರಗತಿಯಲ್ಲಿ ಮಂಡಿಸಿರಿ.

### ವಾಕ್ಯ ರಚಿಸಿರಿ

- ಮಾದರಿಯಂತೆ ಅಡಿಗೆರೆ ಎಳೆದ ಪದಗಳ ಪರ್ಯಾಯ ಪದವನ್ನುಪಯೋಗಿಸಿ ಸ್ವಂತವಾಕ್ಯ ರಚಿಸಿರಿ.

  ಮಾದರಿ : ತಾಯಿಯ <u>ಮಮತೆಗೆ</u> ಬೆಲೆ ಕಟ್ಟಲು ಸಾಧ್ಯವಿಲ್ಲ.

  ಅನಾಥ ಮಕ್ಕಳು ಹೆತ್ತವರ <u>ಪ್ರೀತಿಯಿಂದ</u> ವಂಚಿತರಾಗುತ್ತಾರೆ.
- <u>ಮರಣವನ್ನು</u> ತಪ್ಪಿಸಲು ಯಾರಿಂದಲೂ ಸಾಧ್ಯವಿಲ್ಲ.
- ನಮ್ಮ <u>ಮುಖವು</u> ನಸುನಗೆಯಿಂದ ಕೂಡಿಕೊಂಡಿರಬೇಕು.
- ಶ್ರಮ ಪಡುವವನಿಗೆ <u>ಗೆಲುವು</u> ಖಂಡಿತ.
- <u>ಯುದ್ಧವು</u> ಅನೇಕ ನಾಶನಷ್ಟಗಳಿಗೆ ಕಾರಣವಾಗುತ್ತದೆ.

## ವ್ಯಕ್ತಿ ಪರಿಚಯ ಬರೆಯಿರಿ

- ವೀರ ವನಿತೆ ಝಾನ್ಸಿರಾಣಿಯ ಹೋರಾಟದ ಕತೆಯನ್ನು ಓದಿದಿರಲ್ಲವೇ. ಇದೇ ರೀತಿ ಹಲವಾರು ಮಹನೀಯರೂ ಸ್ವಾತಂತ್ರ್ಯಕ್ಕಾಗಿ ಹೋರಾಡಿದ್ದಾರೆ. ಅವರಲ್ಲಿ ಸುಭಾಸ್‌ಚಂದ್ರ ಬೋಸ್ ಕೂಡ ಒಬ್ಬರು. ಅವರ ಕುರಿತಾದ ಮಾಹಿತಿಯನ್ನು ಕೊಡಲಾಗಿದೆ. ಇದರ ಆಧಾರದಲ್ಲಿ ಅವರ ವ್ಯಕ್ತಿ ಪರಿಚಯ ತಯಾರಿಸಿ ಮಂಡಿಸಿರಿ.

| | | |
|---|---|---|
| ಹೆಸರು | : | ಸುಭಾಸ್‌ಚಂದ್ರ ಬೋಸ್ |
| ಜನನ | : | 23.1.1897 |
| ಸ್ಥಳ | : | ಒರಿಸ್ಸಾದ ಕಟಕ್ |
| ತಂದೆ | : | ಜಾನಕೀನಾಥ ಬೋಸ್ |
| ತಾಯಿ | : | ಪ್ರಭಾವತಿ |
| ವಿದ್ಯಾಭ್ಯಾಸ | : | ತತ್ವಶಾಸ್ತ್ರ ವಿಭಾಗದಲ್ಲಿ ಬಿ.ಎ |
| ಸಾಧನೆ | : | ಐ.ಸಿ.ಎಸ್. ಪರೀಕ್ಷೆಯಲ್ಲಿ ನಾಲ್ಕನೇ ಸ್ಥಾನ,ಭಾರತೀಯ ರಾಷ್ಟ್ರೀಯ ಸೇನೆ ಕಟ್ಟಿದ್ದು, ಆಜಾದ್ ಹಿಂದ್ ಫೌಜ್‌ನ ನೇತಾರ,ಇಂಡಿಯನ್ ನೇಶನಲ್ ಕಾಂಗ್ರೆಸ್‌ನ ಅಧ್ಯಕ್ಷರಾಗಿ ಎರಡು ಬಾರಿ ನೇಮಕ. |
| ಪ್ರೇರಣೆ | : | ಸ್ವಾಮಿ ವಿವೇಕಾನಂದರು |
| ಹೋರಾಟದ ವಿಧ | : | ಕ್ರಾಂತಿ ಪಥ |
| ಮರಣ | : | 18.8.1945 |

## ವಿಂಗಡಿಸಿ ಬರೆಯಿರಿ

- ಕೆಳಗೆ ಕೊಟ್ಟಿರುವ ಪದಗಳನ್ನು ವಿಂಗಡಿಸಿ ಬರೆಯಿರಿ.

ಪ್ರಮುಖಳೆನಿಸಿದ, ಮಗಳನ್ನುದ್ದೇಶಿಸಿ, ಆಕಾಶವಿದೆ, ವ್ಯಾಪಾರಕ್ಕೆಂದು, ಬಾಲಕನೊಬ್ಬನು, ಬೇಕೆಂದು, ಕಣ್ಮರೆಯಾದಳು, ಕತ್ತಲಾಯಿತು, ಸೈನಿಕನೊಬ್ಬನು.

## ವಾಕ್ಯ ಬದಲಾಯಿಸಿ ಬರೆಯಿರಿ

- ಮಾದರಿಯಂತೆ ವಾಕ್ಯಗಳನ್ನು ಬದಲಾಯಿಸಿ ಬರೆಯಿರಿ.

ಮಾದರಿ: ಮನೂ ಕತ್ತಿವರಸೆ ಕಲಿತಳು.

ಮನೂ ಕತ್ತಿವರಸೆ ಕಲಿಯುತ್ತಾಳೆ.

ಮನೂ ಕತ್ತಿವರಸೆ ಕಲಿಯುವಳು.

- ಗಿರೀಶನು ಹೂದೋಟಕ್ಕೆ ಹೋದನು.
- ಜೋಸೆಫ್ ಮೇಘಾಲಯದಿಂದ ಬಂದನು
- ಫಾತಿಮ ಆಡನ್ನು ಮಾರಿದಳು.
- ರೈಲು ತಡವಾಗಿ ಬಂತು.

## ಪದವಿಹಾರ

- ಕೊಟ್ಟಿರುವ ಅಕ್ಷರಗಳ ಸಹಾಯದಿಂದ ಅರ್ಥಪೂರ್ಣ ಪದಗಳನ್ನು ರಚಿಸಿರಿ. ವೃತ್ತದೊಳಗಿನ ಅಕ್ಷರಗಳನ್ನು ಅನುಕ್ರಮವಾಗಿ ಜೋಡಿಸಿದಾಗ ಸಿಗುವ ವಿಶೇಷ ಪದವನ್ನು ಕಂಡುಹಿಡಿಯಿರಿ.

| ವಿ | ಭ್ಯಾ | ಸ | ದ್ಯಾ |
|---|---|---|---|
| | ◯ | | |

| ನೆ | ಪ | ಪಾ | ಲ | ರಿ |
|---|---|---|---|---|
| | | ◯ | ◯ | |

| ಮಾ | ಸ | ಚ | ಲೋ | ನೆ |
|---|---|---|---|---|
| ◯ | | | | |

| ತ | ದ್ಧ | ಪ | ರಿ | ಸಂ |
|---|---|---|---|---|
| | | | | ◯ |

| ರಾ | ರಂ | ನ | ಪು | ಭ |
|---|---|---|---|---|
| | | | ◯ | |

| ಕ | ನ | ಥ | ನ | ಕ | ವ |
|---|---|---|---|---|---|
| ◯ | | | | | |

| ರಂ | ಳಾ | ಗ | ಗು | ಪಾ | ತ |
|---|---|---|---|---|---|
| | | ◯ | | | |

| ಸ್ಮ | ಅ | ರ | ಯ | ವಿ | ಣೀ |
|---|---|---|---|---|---|
| | ◯ | | | | |

| | | | | | | | | |
|---|---|---|---|---|---|---|---|---|
| ◯ | ◯ | ◯ | ◯ | ◯ | ◯ | ◯ | ◯ | ◯ |

## ಸಂಗ್ರಹಿಸಿರಿ

- ತಮ್ಮ ನಾಡಿನ ರಕ್ಷಣೆಗಾಗಿ ಹೋರಾಡಿದ ವೀರವನಿತೆಯರ ಕತೆಗಳನ್ನು ಸಂಗ್ರಹಿಸಿ ಸಂಚಿಕೆ ತಯಾರಿಸಿರಿ.

# ಐದು ಬೆರಳು ಕೂಡಿ



ಐದು ಬೆರಳು ಕೂಡಿ ಒಂದು ಮುಷ್ಟಿಯು
ಹಲವು ಮಂದಿ ಸೇರಿ ಈ ಸಮಷ್ಟಿಯು
ಬೇರೆ ಬೇರೆ ಒಕ್ಕಲು
ಒಂದೆ ತಾಯ ಮಕ್ಕಳು
ಕೂಡಿ ಹಾಡಿದಾಗ ಗೆಲುವು ಗೀತೆಗೆ–ಭರತ ಮಾತೆಗೆ
ಮೊಳಗಲಿ ಮೊಳಗಲಿ ನಾಡಗೀತವು
ಮೂಡಲಿ ಮೂಡಲಿ ಸುಪ್ರಭಾತವು
ಹಿಮಾಲಯದ ನೆತ್ತಿಯಲ್ಲಿ ಕಾಶ್ಮೀರದ ಭಿತ್ತಿಯಲ್ಲಿ
ಅಸ್ಸಾಮಿನ ಕಾಡಿನಲ್ಲಿ ಐದು ನದಿಯ ನಾಡಿನಲ್ಲಿ
ಹೊತ್ತಿ ಉರಿವ ಬೆಂಕಿ ಆರಿ ತಣ್ಣಗಾಗಲಿ
ಬಂಜರಲ್ಲಿ ಬೆಳೆದು ಹಚ್ಚ ಹಸಿರು ತೂಗಲಿ
ಗಂಗೆ–ತಂಗಿ ಕಾವೇರಿಯ ತಬ್ಬಿಕೊಳ್ಳಲಿ
ಲಡಾಕ ನೇಫ ಗಡಿಗಳಲ್ಲಿ ಮಂತ್ರಾಲಯ ಗುಡಿಗಳಲ್ಲಿ
ಭತ್ತ ಗೋಧಿ ಬೆಳೆಯುವಲ್ಲಿ ಪ್ರೀತಿಯು ಮೈತಳೆಯುವಲ್ಲಿ
ದುಡಿದ ಹಿಂದು ಮುಸಲ್ಮಾನರೊಂದುಗೂಡಲಿ
ಆರದಿರಲಿ ಪ್ರೀತಿ ದೀಪ ಕಣ್ಣಗೂಡಲಿ.
ಎದೆಯ ಕೊಳೆಗಳನ್ನು ಅಶ್ರುಧಾರೆ ತೊಳೆಯಲಿ.



ಎಚ್.ಎಸ್.ವೆಂಕಟೇಶಮೂರ್ತಿ

**ಎಚ್.ಎಸ್. ವೆಂಕಟೇಶಮೂರ್ತಿ**



ಎಚ್.ಎಸ್. ವೆಂಕಟೇಶಮೂರ್ತಿಯವರು ಶಿವಮೊಗ್ಗ ಜಿಲ್ಲೆಯ ಹೋವಿಗೆರೆಯಲ್ಲಿ 1944ರಲ್ಲಿ ಜನಿಸಿದರು.ಇವರು ಎಂ.ಎ.ಪದವಿ ಗಳಿಸಿದ ಮೇಲೆ ಬೆಂಗಳೂರಿನ ಸೈಂಟ್ ಜೋಸೆಫ್ ಕಾಲೇಜಿನಲ್ಲಿ ಪ್ರಾಧ್ಯಾಪಕರಾಗಿ ಸೇವೆಯನ್ನು ಆರಂಭಿಸಿದರು. ಹಕ್ಕಿಸಾಲು, ಪತಿವ್ರತೆ, ಬಾಗಿಲು ಬಡಿಯುವ ಜನ, ಒಣಮರದ ಗಿಳಿಗಳು ಇವರ ಕವನ ಸಂಕಲನಗಳಾಗಿವೆ.

## ಚಟುವಟಿಕೆಗಳು

### ಹಾಡಿರಿ

- ಕವಿತೆಯನ್ನು ರಾಗ, ತಾಳ, ಭಾವದೊಂದಿಗೆ ಹಾಡಿರಿ.

### ಉತ್ತರಿಸಿರಿ

- ಭಾರತಮಾತೆಗೆ ಗೆಲುವು ಉಂಟಾಗುವುದು ಯಾವಾಗ?
- 'ಹೊತ್ತಿ ಉರಿವ ಬೆಂಕಿ ಆರಿ ತಣ್ಣಗಾಗಲಿ' ಈ ಮಾತು ಏನನ್ನು ಸೂಚಿಸುತ್ತದೆ?

### ಆಶಯ ಬರೆಯಿರಿ

- ಕವಿತೆಯನ್ನು ಓದಿ ಆಸ್ವಾದಿಸಿದಿರಲ್ಲವೇ. ಈ ಕವಿತೆಯ ಆಶಯವನ್ನು ಬರೆಯಿರಿ.

### ಪ್ರಾಸಪದ ಗುರುತಿಸಿರಿ

- ಕವಿತೆಯಲ್ಲಿ ಬಂದಿರುವ ಪ್ರಾಸಪದಗಳನ್ನು ಗುರುತಿಸಿ ಬರೆಯಿರಿ.

### ಗುಂಪು ಮಾಡಿರಿ

- ಕೆಳಗೆ ಕೊಟ್ಟಿರುವ ತಖ್ತೆಯಿಂದ ಬೇರೆ ಬೇರೆ ನಾಮಪದಗಳನ್ನೂ ಅವುಗಳ ಪರ್ಯಾಯ ಪದಗಳನ್ನೂ ಗುರುತಿಸಿ ಗುಂಪುಮಾಡಿರಿ.

ಪಂಕಜ, ಅಶ್ವ, ಆನೆ, ಅಂಬುಜ, ಜಲಜ, ಹಯ, ವಾಜಿ, ಗಜ, ತಾವರೆ, ಕರಿ,
ನಳಿನಿ, ಆಕಳು, ಹಸು, ಸರೋಜ, ಕುದುರೆ, ಸಲಗ, ತುರಗ, ನೀರಜ, ಸರಸಿಜ

### ಹೋಲಿಕೆಯ ಟಿಪ್ಪಣಿ ಬರೆಯಿರಿ

- 'ನಮ್ಮದೇಶ' ಕವಿತೆಯನ್ನು 'ಐದು ಬೆರಳು ಕೂಡಿ' ಕವಿತೆಯೊಂದಿಗೆ ಹೋಲಿಸಿ ಬರೆಯಿರಿ.

## ನಮ್ಮ ದೇಶ

ನಮ್ಮ ದೇಶ ಭಾರತ ಪುಣ್ಯಭೂಮಿ ಭಾರತ
ಗಣ್ಯ ಪುರುಷರಿಂದ ಮೆರೆವ ದೇವಭೂಮಿ ಭಾರತ
ಗಂಗೆ, ತುಂಗೆ ನದಿಗಳು ಇಲ್ಲಿ ಹರಿಯುತಿರುವವು
ಗಾಂಧಿ, ತಿಲಕ, ಗೋಖಲೆ ಇಲ್ಲಿ ಬಾಳಿ ಬೆಳೆದರು
ಹಿಂದು, ಕ್ರಿಸ್ತ, ಫಾರಸಿ, ಜೈನ, ಮುಸಲ್ಮಾನರು
ಒಂದುಗೂಡಿ ಬಾಳಿದಂಥ ಪುಣ್ಯ ಭೂಮಿ ನಮ್ಮದು

ಜಾತಿಭೇದ ಮರೆಯುವ ನೀತಿ ಒಂದೇ ಎನ್ನುವ
ಪ್ರೀತಿಯಿಂದ ಮನುಜಕುಲದಿ ಖ್ಯಾತಿಯನ್ನು ಹೊಂದುವ
ಮಾತೆ ಸೇವೆಗಾಗಿಯೇ ರಾತ್ರಿ ಹಗಲು ದುಡಿಯುವ
ಗೀತೆ ಸಾರಿದಂಥ ತತ್ವ ಮಾತಿನಂತೆ ನಡೆಯುವ

### ಮುಂದುವರಿಸಿ ಬರೆಯಿರಿ

- ಕೆಳಗೆ ಕೊಟ್ಟಿರುವ ಪದ್ಯದ ಸಾಲುಗಳನ್ನು ಮುಂದುವರಿಸಿ ಬರೆಯಿರಿ.

ದೇಶದ ಗೌರವ ಉಳಿಸೋಣ
ದೇಶಸೇವೆಗೆ ತೊಡಗೋಣ
..................................
..................................

### ಸಂಗ್ರಹಿಸಿರಿ

- ದೇಶಭಕ್ತಿ ಗೀತೆಗಳನ್ನು ಸಂಗ್ರಹಿಸಿ ತರಗತಿಯಲ್ಲಿ ಹಾಡಿರಿ.

# ಸಮಬಾಳು

ಭಾರತವು ವಿಭಿನ್ನ ಭಾಷೆಗಳನ್ನು, ವಿಭಿನ್ನ ಆಹಾರ, ವಿಚಾರ, ಜಾತಿ, ಮತ, ಧರ್ಮಗಳನ್ನೊಳಗೊಂಡ ದೇಶ. ಸೌಹಾರ್ದತೆ, ಸಮಾನತೆ, ಸಹಿಷ್ಣುತೆ ಇವು ಭಾರತೀಯ ಸಂಸ್ಕೃತಿಯ ಮೂಲತತ್ವಗಳು. 'ಪರಸ್ಪರ ಪ್ರೀತಿ, ಸೌಹಾರ್ದದಿಂದ ಮಾತ್ರ ಜೀವನದಲ್ಲಿ ಸುಖ ಮತ್ತು ಸಂತೋಷವನ್ನು ಪಡೆಯಲು ಸಾಧ್ಯ' ಎಂಬುದು ಭಾರತೀಯರ ಅಚಲವಾದ ನಂಬಿಕೆ.

ಪ್ರಾಚೀನ ಕಾಲದಿಂದ ನಡೆದುಕೊಂಡು ಬಂದಿರುವ ಭಾರತೀಯ ಸಾಂಸ್ಕೃತಿಕ ಪರಂಪರೆಯು ಮೌಲ್ಯಯುತವಾದುದು. "ಆರ್ಯರೋ, ಮೊಗಲರೋ, ಕ್ರೈಸ್ತರೋ ತಡೆಯೇನು ಎಲ್ಲರೂ ಬರಲೆಂದು ಸ್ವಾಗತಿಸಿದೆ" ಎಂದು ಹಾಡಿದ ಕವಿ ಕಯ್ಯಾರ ಕಿಞ್ಞಣ್ಣ ರೈಗಳ ನುಡಿಯಂತೆ ಭಾರತವು ಜಾತಿ, ಮತ, ಧರ್ಮಗಳ ಭೇದವಿಲ್ಲದೆ ಎಲ್ಲ ವಿದೇಶೀಯರಿಗೂ ಅನಾದಿಕಾಲದಿಂದಲೂ ಆಶ್ರಯವನ್ನು ನೀಡುತ್ತಾ ಬಂದಿದೆ. ವೇದ–ಉಪನಿಷತ್ತುಗಳ ಮೂಲಕ ಮಾನವತೆಯ ಸಂದೇಶವನ್ನು ಜಗತ್ತಿಗೆ ಸಾರಿದೆ. ಭಾರತೀಯ ಪುರಾಣ, ಸಾಹಿತ್ಯ, ಕಲೆ ಮುಂತಾದುವು ಈ ಕಾರಣದಿಂದಲೇ ಜಗತ್ತಿನಲ್ಲಿ ಮಾನ್ಯತೆಯನ್ನು ಪಡೆದಿವೆ. ಶಿಕ್ಷಣ, ವಿಜ್ಞಾನ ಕ್ಷೇತ್ರಗಳಲ್ಲಿ ಪ್ರಾಚೀನ ಕಾಲದಿಂದಲೇ ಭಾರತವು ಹಿರಿದಾದ ಸ್ಥಾನಮಾನಗಳನ್ನು ಪಡೆದುಕೊಂಡಿದೆ. ಪ್ರಾಚೀನ ಭಾರತದಲ್ಲಿದ್ದ ನಲಂದಾ, ತಕ್ಷಶಿಲಾ ಎಂಬ ವಿಶ್ವವಿದ್ಯಾನಿಲಯಗಳು ಜಾತಿ, ಮತ, ಧರ್ಮಗಳ ಭೇದವೆಣಿಸದೆ ಜಗತ್ತಿನ ಎಲ್ಲರಿಗೂ ಶಿಕ್ಷಣವನ್ನು ನೀಡುತ್ತಿದ್ದುವು ಎಂಬುದನ್ನು ನಾವಿಂದು ಹೆಮ್ಮೆಯಿಂದ ಹೇಳಿಕೊಳ್ಳಬಹುದು. ಆದುದರಿಂದಲೇ ಸ್ವಾಮಿ ವಿವೇಕಾನಂದರಂತಹ ದಾರ್ಶನಿಕರು ಭಾರತೀಯ ತತ್ವ,ಸಿದ್ಧಾಂತಗಳನ್ನು ಪೂಜನೀಯಭಾವದಿಂದ ಗೌರವಿಸುತ್ತಿದ್ದರು. "ಆಕಾಶದಿಂದ ನೆಲಕ್ಕೆ ಬಿದ್ದ ನೀರು ವಿವಿಧ ನದಿಗಳ ಮೂಲಕ ಕೊನೆಗೆ ಸಮುದ್ರವನ್ನು ಸೇರುವಂತೆ ಜಗತ್ತಿನ ಎಲ್ಲಾ ಧರ್ಮಗಳ ಮುಖ್ಯ ಉದ್ದೇಶ ಮಾನವ ಕಲ್ಯಾಣದತ್ತ ಸಾಗುವುದು" ಎಂಬ ಸಂದೇಶವನ್ನು ವಿವೇಕಾನಂದರು ಜಗತ್ತಿಗೆ ಸಾರಿದರು. ದಾರ್ಶನಿಕರ ಇಂತಹ ಸಾಂಸ್ಕೃತಿಕ ಹಿರಿಮೆಗಳು ಭಾರತದ ಮನೋ ವೈಶಾಲ್ಯವನ್ನೂ, ವೈವಿಧ್ಯವನ್ನೂ ಉಳಿಸಿಕೊಂಡು ಬಂದಿವೆ. ಮಾತ್ರವಲ್ಲದೆ ವಿವಿಧತೆಯಲ್ಲಿ ಏಕತೆಯನ್ನು ಕಾಣುವಲ್ಲಿ ಭಾರತೀಯ ಸಂಸ್ಕೃತಿ ಹಾಗೂ ಪರಂಪರೆ ಪ್ರಧಾನ ಪಾತ್ರವಹಿಸಿದೆ.

ಹಲವು ವರ್ಷಗಳ ಕಾಲ ಬ್ರಿಟಿಷರ ದಾಸ್ಯದಲ್ಲಿದ್ದ ಭಾರತವು ಇಂದು ಸ್ವತಂತ್ರ ರಾಷ್ಟ್ರವಾಗಿ ಮೆರೆಯುತ್ತಿದೆ. ಭಾರತಕ್ಕೆ ಸ್ವಾತಂತ್ರ್ಯ ದೊರಕಿಸಿಕೊಡಲು ಹೋರಾಡಿದ ಮಹಾತ್ಮರೆಲ್ಲರ ತ್ಯಾಗ ಹಾಗೂ ದೇಶಪ್ರೇಮವನ್ನು ಎಷ್ಟು ಹೊಗಳಿದರೂ ಕಡಿಮೆಯೆ. ಸ್ವಾತಂತ್ರ್ಯಕ್ಕಾಗಿ ಹೋರಾಡಿದ ಮಹಾತ್ಮಾ ಗಾಂಧಿಯವರಂತಹ ಮಹಾನುಭಾವರ ಒಗ್ಗಟ್ಟು, ಒಮ್ಮತ ಹಾಗೂ ಸಹನೆಗಳನ್ನು ನಾವು ಗೌರವಿಸಲೇಬೇಕು. ಮಾತ್ರವಲ್ಲದೆ ಅವರ ಸರ್ವಸಮಾನತೆಯ ದೃಷ್ಟಿ ನಮಗೆ ಆದರ್ಶವಾಗಬೇಕು. ಭಾರತವು ಇಂದು ಅತಿ ದೊಡ್ಡ ಪ್ರಜಾಪ್ರಭುತ್ವ ರಾಷ್ಟ್ರವೆಂಬ ಹೆಗ್ಗಳಿಕೆಯನ್ನು ಪಡೆಯಲು ನಮ್ಮ ಹಿರಿಯರ ಐಕ್ಯದ ದುಡಿಮೆಯೇ ಕಾರಣವಾಗಿದೆ.

ಒಂದು ತೋಟದಲ್ಲಿ ಅನೇಕ ಬಗೆಯ ಗಿಡಗಳು, ಮರಗಳು, ಬಳ್ಳಿಗಳು ಬೆಳೆದಿರುತ್ತವೆ. ವಿವಿಧ ರೀತಿಯ ಬಣ್ಣಬಣ್ಣದ ಹೂಗಳು ಅರಳಿ ವೈವಿಧ್ಯಪೂರ್ಣ ಪರಿಮಳವನ್ನು ಬೀರುತ್ತವೆ. ಅವೆಲ್ಲ ಪ್ರಕೃತಿ ಮಾತೆಯ ಕೊಡುಗೆ. ಅವು ಪ್ರಕೃತಿ ಮಾತೆಯು ಸರ್ವರನ್ನೂ ಸಮಾನವಾಗಿ ಕಾಣುವ ಸಂದೇಶವನ್ನು ಸಾರುತ್ತವೆ. ಮಾನವರಾದ ನಾವು ನಿಸರ್ಗದಲ್ಲಿರುವ ಈ

ಸಮತಾವಾದವನ್ನು ನೋಡಿ ನಮ್ಮ ಜೀವನದಲ್ಲೂ ಅದನ್ನು ಅಳವಡಿಸಿಕೊಳ್ಳಬೇಕು. ನಮ್ಮ ಸುತ್ತಮುತ್ತಲೂ ಬೇರೆಬೇರೆ ಭಾಷೆಗಳನ್ನಾಡುವ ಜನರಿದ್ದಾರೆ. ಬೇರೆಬೇರೆ ಆಚಾರ ವಿಚಾರಗಳನ್ನು ರೂಢಿಸಿಕೊಂಡವರಿದ್ದಾರೆ. ಈ ಎಲ್ಲಾ ವೈವಿಧ್ಯಗಳು ನಮ್ಮ ಸಂಸ್ಕೃತಿಯ ಸಂಪನ್ನತೆಯ ಲಕ್ಷಣ. ಪ್ರತಿಯೊಂದು ಭಾಷೆ, ಆಚಾರವಿಚಾರ, ಜಾತಿ, ಮತ, ಧರ್ಮಗಳನ್ನು ಪ್ರೀತಿಸುವ ಹಾಗೂ ಗೌರವಿಸುವ ಗುಣ ನಮ್ಮಲ್ಲಿರಬೇಕು. ಆಗ ನಮ್ಮ ವ್ಯಕ್ತಿತ್ವ ಶೋಭಾಯಮಾನವಾಗುತ್ತದೆ. ಈ ಮೂಲಕ ವೈವಿಧ್ಯಗಳೇ ಭಾರತದ ಸಂಪತ್ತೆನಿಸುತ್ತದೆ. ಇತರ ರಾಷ್ಟ್ರಗಳ ಮಧ್ಯೆ ಭಾರತವು ತಲೆ ಎತ್ತಿ ನಿಲ್ಲುವಂತಾಗುತ್ತದೆ.

ಹಿಂದೂ, ಕ್ರಿಶ್ಚಿಯನ್, ಮುಸ್ಲಿಂ, ಬೌದ್ಧ, ಜೈನ, ಸಿಖ್, ಪಾರ್ಸಿ, ಯಹೂದಿ ಮುಂತಾದ ಧರ್ಮ ಹಾಗೂ ಮತಾನುಯಾಯಿಗಳು ಭಾರತದಲ್ಲಿ ಅದೆಷ್ಟೋ ವರ್ಷಗಳಿಂದ ಬಾಳಿ ಬದುಕುತ್ತಿದ್ದಾರೆ. ತಮ್ಮತಮ್ಮ ಧರ್ಮಗಳಲ್ಲಿ ವಿಶ್ವಾಸವಿರಿಸಿಕೊಂಡು 'ನಾವೆಲ್ಲರೂ ಭಾರತಮಾತೆಯ ಮಕ್ಕಳು' ಎಂಬ ಮನೋಭಾವನೆಯಿಂದ ನೆಮ್ಮದಿಯಿಂದ ಬದುಕುತ್ತಿದ್ದಾರೆ.

ಭಾರತದ ಸಂವಿಧಾನವೂ ಭಾರತದ ಪ್ರಜೆಗಳಿಗೆ ಸಮಾನ ಹಕ್ಕುಬಾಧ್ಯತೆಗಳನ್ನು ನೀಡಿದೆ. ಕಾನೂನಿನ ದೃಷ್ಟಿಯಲ್ಲಿ ಬಡವ–ಶ್ರೀಮಂತ, ವಿದ್ಯಾವಂತ–ಅವಿದ್ಯಾವಂತ ಎಂಬ ಭೇದಭಾವವಿಲ್ಲ. ಸಂವಿಧಾನದ ಹಕ್ಕನ್ನು ಅನುಭವಿಸುವ ಹಕ್ಕು ಭಾರತದ ಪ್ರತಿಯೊಬ್ಬ ಪ್ರಜೆಗೂ ಇದೆ. ಅದಕ್ಕೆ ಯಾವುದೇ ಧರ್ಮ, ಜಾತಿ, ಲಿಂಗ, ಪಂಗಡ, ಭಾಷೆ ಅಡ್ಡಿಯಾಗಬಾರದೆಂಬ ಆಶಯವೂ ನಮ್ಮ ಸಂವಿಧಾನದಲ್ಲಿದೆ. ಆದುದರಿಂದ ನಮ್ಮ ಸಂಸ್ಕೃತಿ, ಪರಂಪರೆ ಹಾಗೂ ಸಂವಿಧಾನವನ್ನು ಗೌರವಿಸಬೇಕು. "ಎಲ್ಲರಿಗೂ ಸಮಬಾಳು ಎಲ್ಲರಿಗೂ ಸಮಪಾಲು" ಎಂಬ ಐಕ್ಯಮಂತ್ರವನ್ನು ನಾವು ಜೀವನದಲ್ಲಿ ಅಳವಡಿಸಿಕೊಂಡರೆ ಮಾತ್ರ ನಮ್ಮ ಜೀವನ ಸಾರ್ಥಕವೆನಿಸುವುದು.

## ಚಟುವಟಿಕೆಗಳು

### ಅಭಿಪ್ರಾಯ ಬರೆಯಿರಿ

- "ಎಲ್ಲರಿಗೂ ಸಮಬಾಳು, ಎಲ್ಲರಿಗೂ ಸಮಪಾಲು" ಎಂಬ ಮಾತಿನ ಬಗ್ಗೆ ನಿಮ್ಮ ಅಭಿಪ್ರಾಯವನ್ನು ಬರೆದು ತರಗತಿಯಲ್ಲಿ ಮಂಡಿಸಿರಿ.

### ಉತ್ತರಿಸಿರಿ

- ಭಾರತೀಯ ಸಂಸ್ಕೃತಿಯ ಮೂಲ ತತ್ವಗಳು ಯಾವುವು?
- ಧರ್ಮದ ಬಗ್ಗೆ ವಿವೇಕಾನಂದರು ಸಾರಿದ ಸಂದೇಶವೇನು?
- ಪ್ರಕೃತಿ ಮಾತೆಯ ಕೊಡುಗೆ ಏನು?
- ನಮ್ಮ ಜೀವನ ಸಾರ್ಥಕವಾಗುವುದು ಹೇಗೆ?

### ಕರಪತ್ರ ತಯಾರಿಸಿರಿ

- ರಾಷ್ಟ್ರೀಯ ಭಾವೈಕ್ಯವನ್ನು ಸಾರುವ ಕರಪತ್ರವೊಂದನ್ನು ತಯಾರಿಸಿರಿ.

### ವಾಕ್ಯ ರಚಿಸಿರಿ

ಅಡಿಗೆರೆ ಎಳೆದ ಪದದ ವಿರೋಧಾರ್ಥ ಪದವನ್ನುಪಯೋಗಿಸಿಕೊಂಡು ಬೇರೆ ವಾಕ್ಯ ರಚಿಸಿರಿ.


- ಮಾನವರಲ್ಲಿ ಅಸಮಾನತೆ ಸರಿಯಲ್ಲ
- ಜನರಲ್ಲಿ ಬಿಕ್ಕಟ್ಟು ಮೂಡಿದರೆ ಅದು ಅನಾಹುತಕ್ಕೆ ಕಾರಣವಾಗುತ್ತದೆ.
- ಜನರು ಅಧರ್ಮದ ದಾರಿಯಲ್ಲಿ ಸಾಗಬಾರದು.
- ಸಮಾಜದಲ್ಲಿರುವ ದುರಾಚಾರಗಳನ್ನು ದೂರ ಮಾಡುವುದೇ ನಮ್ಮ ಉದ್ದೇಶವಾಗಿರಬೇಕು.
- ಹಿರಿಯರನ್ನು ಅಗೌರವದಿಂದ ಕಾಣುವುದು ನಮ್ಮ ಸಂಸ್ಕೃತಿಯ ಲಕ್ಷಣವಲ್ಲ.

### ಪತ್ರಿಕಾವಾರ್ತೆ ತಯಾರಿಸಿರಿ

- ನಿಮ್ಮ ಶಾಲೆಯಲ್ಲಿ ಗಾಂಧೀಜಯಂತಿಯ ಪ್ರಯುಕ್ತ ನೀವು ನಡೆಸುವ ಚಟುವಟಿಕೆಗಳ ಮಾಹಿತಿಯನ್ನು ಪತ್ರಿಕೆಗೆ ನೀಡಲು ಸೂಕ್ತವಾದ ವಾರ್ತೆಯನ್ನು ತಯಾರಿಸಿರಿ.

### ಪ್ರಬಂಧ ತಯಾರಿಸಿರಿ

- ಕೆಳಗಿನ ಪದಸೂರ್ಯದ ಸಹಾಯದಿಂದ ರಾಷ್ಟ್ರೀಯ ಭಾವೈಕ್ಯದ ಕುರಿತು ಪ್ರಬಂಧ ತಯಾರಿಸಿರಿ.



## ಕಲಿಕಾ ಸಾಧನೆಗಳು

- ಆಲಿಸಿ ಓದಿ ತಿಳಿದ ವಿಚಾರಗಳನ್ನು ತರ್ಕಬದ್ಧವಾಗಿ ವಿಶ್ಲೇಷಿಸಿ ಸ್ವಂತ ಅಭಿಪ್ರಾಯಗಳನ್ನು ವಾಚಿಕವಾಗಿ ಮತ್ತು ಲಿಖಿತವಾಗಿ ಪ್ರಕಟಿಸುವುದು.
- ಗದ್ಯ-ಪದ್ಯಗಳನ್ನು ಆಶಯ ಸ್ಪಷ್ಟತೆಯೊಂದಿಗೆ ನಿರರ್ಗಳವಾಗಿ ಮತ್ತು ಸ್ಫುಟತೆಯೊಂದಿಗೆ ಓದುವುದು ಮತ್ತು ಪ್ರಧಾನ ಆಶಯಗಳನ್ನು ಬಾಯ್ದೆರೆಯಾಗಿ ಮಂಡಿಸುವುದು.
- ಜನಪದಗೀತೆ, ಕವಿತೆಗಳ ರಾಗ, ತಾಳ, ಭಾವ ಎಂಬಿವುಗಳನ್ನು ಆಸ್ವಾದಿಸುವುದು, ತಾಳದೊಂದಿಗೆ ಭಾವನಾತ್ಮಕವಾಗಿ ಹಾಡಿ ಮಂಡಿಸುವುದು. ಕಂಠಪಾಠ ಮಾಡುವುದು.
- ಸ್ವಂತ ಅಭಿರುಚಿಗೆ ತಕ್ಕಂತೆ ಕಥೆ, ಕವಿತೆ, ನಾಟಕ, ಪ್ರವಾಸಕಥನ ಮೊದಲಾದ ವಿಭಿನ್ನ ವಿಭಾಗಗಳಲ್ಲಿ ಒಳಗೊಂಡ ಪುಸ್ತಕಗಳನ್ನು ಗುರುತಿಸಿ ಓದುವುದು ಮತ್ತು ಓದಿ ತಿಳಿದ ವಿಚಾರಗಳನ್ನು ವಿವಿಧ ರೀತಿಯಲ್ಲಿ ಪ್ರಕಟಪಡಿಸುವುದು.
- ವಿಭಿನ್ನ ರೀತಿಯ ವ್ಯವಹಾರ ರೂಪಗಳನ್ನು ತಯಾರಿಸುವುದು. ಅವುಗಳನ್ನು ಸಂಚಿಕೆ, ಭಿತ್ತಿಪತ್ರಿಕೆ, ಹಸ್ತಪತ್ರಿಕೆ, ನಿಯತಕಾಲಿಕಗಳಲ್ಲಿ ಪ್ರಕಟಿಸುವುದು.
- ಸೃಜನಾತ್ಮಕ ರಚನೆಗಳನ್ನು ಓದಿ, ಅವುಗಳ ಪ್ರಧಾನ ಆಶಯ ಕೆಡದಂತೆ ಸಂಕ್ಷಿಪ್ತವಾಗಿ ಬರೆಯುವುದು.
- ಸೂಕ್ತ ಸೂಚಕಗಳನ್ನು ರೂಪಿಸಿ ಸ್ವಂತ ಹಾಗೂ ಇತರರ ರಚನೆಗಳ ಮೌಲ್ಯನಿರ್ಣಯಿಸುವುದು.
- ಕಥೆ, ಕವಿತೆಗಳಲ್ಲಿ ಕಥಾಪಾತ್ರಗಳ ಮಾನಸಿಕ ಸ್ಥಿತಿ, ಅವುಗಳಿಗಿರುವ ಸ್ಥಾನ ಇತ್ಯಾದಿಗಳನ್ನು ಗುರುತಿಸಿ ಬಾಯ್ದೆರೆಯಾಗಿ ಮತ್ತು ಲಿಖಿತವಾಗಿ ಪಾತ್ರಚಿತ್ರಣ ಮಾಡುವುದು.
- ವಿವಿಧ ಕವಿತೆಗಳನ್ನು ಕಂಠಪಾಠ ಮಾಡಿ ಸೂಕ್ತವಾದ ರಾಗ, ತಾಳಗಳೊಂದಿಗೆ ಭಾವಪೂರ್ಣವಾಗಿ ಹಾಡುವುದು.
- ಸ್ವಂತ ಆಶಯಗಳನ್ನು ಶಿಷ್ಟಭಾಷೆಯಲ್ಲಿ ತಪ್ಪಿಲ್ಲದೆ ಬರೆಯುವುದು.
- ಓದಿದ ವಿಚಾರಗಳನ್ನು ವಿಶ್ಲೇಷಿಸಿ ತನ್ನ ಅಭಿಪ್ರಾಯಗಳನ್ನು ಭಾಷಣ, ಪ್ರಬಂಧ ಮತ್ತು ಚರ್ಚೆಗಳ ಮೂಲಕ ಮಂಡಿಸುವುದು.
- ಪರಿಚಿತವಾದ ಕವಿತೆಗಳಲ್ಲಿರುವ ಬಿಂಬಕಲ್ಪನೆ, ವರ್ಣನೆ ಎಂಬಿವುಗಳನ್ನು ಗುರುತಿಸುವುದು ಮತ್ತು ವಾಚಿಕವಾಗಿ ಮಂಡಿಸುವುದು.
- ದೃಶ್ಯ-ಶ್ರಾವ್ಯ ಮಾಧ್ಯಮಗಳ ಮೂಲಕ ಗಳಿಸಿದ ವಿಚಾರಗಳನ್ನು ತನ್ನ ರಚನೆಯಲ್ಲಿ ಬಳಸುವುದು.

3

# ಸುತ್ತ ಮುತ್ತ

ಮಾನವನು ತನ್ನಲ್ಲಿದ್ದ ಸಂಪತ್ತನ್ನು ಯೋಗ್ಯವಾದ ರೀತಿಯಲ್ಲಿ ಬಳಸಬೇಕು. "ಬಚ್ಚಿಟ್ಟದ್ದು ಪರರಿಂಗೆ" ಎಂದು ಸರ್ವಜ್ಞನು ಹೇಳಿದಂತೆ ತಮ್ಮಲ್ಲಿದ್ದುದನ್ನು ಜಿಪುಣತನದಿಂದ ಬಚ್ಚಿಟ್ಟರೆ ಅದು ತಮಗೂ ಸಮಯಕ್ಕೆ ಒದಗಲಾರದು ಎಂಬ ಅರಿವು ನಮ್ಮಲ್ಲಿರಬೇಕು. ಎಲ್ಲರೊಳು ಒಂದಾಗಿ ಎಲ್ಲರಿಗೂ ಬೇಕಾಗಿ ನಾವು ಬದುಕೋಣ.



# ಮರವಿದ್ದು ಫಲವೇನು?



ಮರವಿದ್ದು ಫಲವೇನು? ನೆಳಲಿಲ್ಲದನ್ನಕ!
ಧನವಿದ್ದು ಫಲವೇನು ದಯವಿಲ್ಲದನ್ನಕ ?
ಹಸುವಿದ್ದು ಫಲವೇನು ಹಾಲಿಲ್ಲದನ್ನಕ ?
ರೂಪಿದ್ದು ಫಲವೇನು ಗುಣವಿಲ್ಲದನ್ನಕ ?
ಅಲಗಿದ್ದು ಫಲವೇನು ಮನವಿಲ್ಲದನ್ನಕ
ನಾನಿದ್ದು ಫಲವೇನು ನಿಮ್ಮ ಜ್ಞಾನವಿಲ್ಲದನ್ನಕ ! ಚೆನ್ನಮಲ್ಲಿಕಾರ್ಜುನ
ಗಗನದ ಗುಂಪ ಚಂದ್ರಮ ಬಲ್ಲುದಲ್ಲದೆ
ಮೇಲಿದ್ದಾಡುವ ಹದ್ದು ಬಲ್ಲುದೇ ಅಯ್ಯಾ
ನದಿಯ ಗುಂಪ ತಾವರೆ ಬಲ್ಲುದಲ್ಲದೆ
ತಡಿಯಲ್ಲಿದ್ದ ಹೊನ್ನಾವರಿಕೆ ಬಲ್ಲುದೇ ಅಯ್ಯ ?
ಪುಷ್ಪದ ಪರಿಮಳವ ತುಂಬಿಬಲ್ಲುದಲ್ಲದೆ
ಕಡೆಯಲಿದ್ದಾಡುವ ನೊರಜು ಬಲ್ಲುದೇ ಅಯ್ಯಾ
ಚೆನ್ನಮಲ್ಲಿಕಾರ್ಜುನಯ್ಯ,
ನಿಮ್ಮ ಶರಣರ ನಿಲುವ ನೀವೇ ಬಲ್ಲಿರಲ್ಲದೆ
ಈ ಕೋಣನ ಮೈಯ ಮೇಲಣ ಸೊಳ್ಳೆಗಳೆತ್ತ ಬಲ್ಲುವಯ್ಯಾ!

ಅಕ್ಕಮಹಾದೇವಿ



### ಅಕ್ಕಮಹಾದೇವಿ

ವಚನ ಸಾಹಿತ್ಯದಲ್ಲಿ ಪ್ರಸಿದ್ಧಳಾದ ಅಕ್ಕಮಹಾದೇವಿಯು ಕ್ರಿ.ಶ. 12 ನೇ ಶತಮಾನದಲ್ಲಿ ಜೀವಿಸಿದ್ದ ವಚನಗಾರ್ತಿ ಶಿವಮೊಗ್ಗ ಜಿಲ್ಲೆಯ ಉಡುತಡಿ ಎಂಬಲ್ಲಿ ಈಕೆ ಜನಿಸಿದಳು. ಬಾಲ್ಯದಿಂದಲೇ ಅಪ್ರತಿಮ ಶಿವಭಕ್ತೆಯಾಗಿದ್ದ ಇವಳ ವಚನಗಳು ದೈವಭಕ್ತಿಯೊಂದಿಗೆ ಮಾನವನು ಅನುಸರಿಸಬೇಕಾದ ನೀತಿ ನಿಯಮಗಳನ್ನು ತಿಳಿಸುತ್ತವೆ. ಇವಳ ವಚನಗಳ ಕೊನೆಗೆ 'ಚೆನ್ನಮಲ್ಲಿಕಾರ್ಜುನ' ಎಂಬ ಅಂಕಿತವನ್ನು ಕಾಣಬಹುದು.

## ಚಟುವಟಿಕೆಗಳು

### ಹಾಡಿರಿ

- ಅಕ್ಕಮಹಾದೇವಿಯ ವಚನವನ್ನು ರಾಗವಾಗಿ ಹಾಡಿರಿ.

### ಸಾಲನ್ನು ಗುರುತಿಸಿರಿ

ಕೆಳಗಿನ ಆಶಯ ಬರುವ ಸಾಲುಗಳನ್ನು ಗುರುತಿಸಿ ಬರೆಯಿರಿ.

- ಆಕಾಶದ ಬಗ್ಗೆ ಚಂದ್ರನಿಗಲ್ಲದೆ ಹದ್ದಿಗೆ ತಿಳಿಯದು.
- ಹೂವಿನ ಪರಿಮಳವನ್ನು ದುಂಬಿಗಳಲ್ಲದೆ ನುಸಿಗಳು ತಿಳಿಯುವವೇ?
- ಗುಣವಿಲ್ಲದಿದ್ದರೆ ರೂಪವಿದ್ದೂ ಪ್ರಯೋಜನವಿಲ್ಲ
- ಹಾಲು ನೀಡದ ಹಸುವಿದ್ದು ಪ್ರಯೋಜನವಿಲ್ಲ
- ನೆರಳು ಕೊಡದ ಮರವಿದ್ದು ಏನು ಪ್ರಯೋಜನ?

### ಹೊಂದಿಸಿ ಬರೆಯಿರಿ

| | |
|---|---|
| ಮರವಿದ್ದು ಫಲವೇನು | ಹಾಲಿಲ್ಲದನ್ನಕ |
| ಗಗನದ ಗುಂಪ | ನೆರಳಿಲ್ಲದನ್ನಕ |
| ಅಲಗಿದ್ದು ಫಲವೇನು | ತುಂಬಿ ಬಲ್ಲುದಲ್ಲದೆ |
| ಹಸುವಿದ್ದು ಫಲವೇನು | ಮನವಿಲ್ಲದನ್ನಕ |
| ಪುಷ್ಪದ ಪರಿಮಳವ | ಚಂದ್ರಮ ಬಲ್ಲುದು |

### ಸಾರಾಂಶ ಬರೆಯಿರಿ

ಅಕ್ಕಮಹಾದೇವಿಯ ವಚನಗಳನ್ನು ಓದಿ ಆಸ್ವಾದಿಸಿದಿರಲ್ಲವೇ? ಅದರ ಸಾರಾಂಶವನ್ನು ಬರೆಯಿರಿ.

### ಸ್ವಾರಸ್ಯ ಬರೆಯಿರಿ

- ಕೆಳಗೆ ಕೊಟ್ಟಿರುವ ವಚನದ ಸ್ವಾರಸ್ಯವನ್ನು ಬರೆಯಿರಿ.

  "ನಿಮ್ಮ ಶರಣರ ನಿಲುವ ನೀವೆ ಬಲ್ಲಿರಲ್ಲದೆ
  ಈ ಕೋಣನ ಮೈಯ ಮೇಲಣ ಸೊಳ್ಳೆಗಳೆತ್ತ ಬಲ್ಲುವಯ್ಯ"

### ಸಂಗ್ರಹಿಸಿರಿ

- ಅಕ್ಕ ಮಹಾದೇವಿಯ ವಚನಗಳನ್ನು ಸಂಗ್ರಹಿಸಿ ತರಗತಿಯಲ್ಲಿ ಹಾಡಿರಿ.

# ಆತ್ಮವಿಶ್ವಾಸದ ಗೆಲುವು

ನಾಗನರೇಶ ಬೆಂಗಳೂರಿನ ಹಳೆ ಮದರಾಸು ರಸ್ತೆಯಲ್ಲಿರುವ ಗೂಗಲ್ ವೆಬ್‌ಸೈಟ್ ಕಂಪೆನಿಯಲ್ಲಿ ದೊಡ್ಡ ಸಂಬಳದ ಕಂಪ್ಯೂಟರ್ ಇಂಜಿನಿಯರ್. ಈತ ಪ್ರಚಂಡ ಆತ್ಮವಿಶ್ವಾಸದಿಂದ "ದೇವ್ರಿದ್ದಾನೆ ಬಿಡಪ್ಪಾ" ಎಂದು ಹೇಳಿಕೊಂಡೆ ಬೆಂಗಳೂರಿನ ರಸ್ತೆಗಳಲ್ಲಿ ವೇಗವಾಗಿ ತನ್ನ ಟ್ರೈಸಿಕಲ್ ಓಡಿಸುತ್ತಾನೆ. "ತಂದೆಯ ಧೈರ್ಯ, ತಾಯಿಯ ಪ್ರೀತಿ, ಅಕ್ಕನ ತ್ಯಾಗ, ಗೆಳೆಯರ–ಗುರುಗಳ ಒಲುಮೆಯೇ ಈ ವರೆಗೆ ನನ್ನ ಕೈ ಹಿಡಿದು ನಡೆಸಿದೆ" ಎನ್ನುತ್ತಾನೆ. "ನನಗೆ ಕಾಲುಗಳಿಲ್ಲ ಎಂಬ ಕೀಳರಿಮೆ ನನ್ನನ್ನು ಎಂದಿಗೂ ಕಾಡಿಲ್ಲ ಮುಂದೆ ಕಾಡುವುದೂ ಇಲ್ಲ" ಎಂದು ತುಂಬು ಆತ್ಮವಿಶ್ವಾಸದಿಂದ ನುಡಿಯುತ್ತಾನೆ.



ನಾಗನರೇಶ ಆಂಧ್ರ ಪ್ರದೇಶದ ಗೋದಾವರಿ ನದೀ ತೀರದಲ್ಲಿರುವ ತೀಪಾರು ಎಂಬ ಹಳ್ಳಿಯಲ್ಲಿ ಜನಿಸಿದನು. ಇವನ ತಂದೆ ಒಬ್ಬ ಲಾರಿಡ್ರೈವರ್, ತಾಯಿ ಗೃಹಿಣಿ. ಈತನ ಅಕ್ಕನ ಹೆಸರು ಸಿರೀಶಾ. ನಾಗನರೇಶನ ಮಾತಾಪಿತರು ನಿರಕ್ಷರಕುಕ್ಷಿಗಳು. ತಮಗೆ ವಿದ್ಯಾಭ್ಯಾಸವಿಲ್ಲ ಎಂಬುದೇ ಈ ದಂಪತಿಗಳ ದೊಡ್ಡ ಕೊರಗಾಗಿತ್ತು. ಅದನ್ನು ತಮ್ಮ ಮಕ್ಕಳೆದುರು ಹೇಳಿಕೊಳ್ಳುತ್ತಾ "ನಾವಂತೂ ಓದಲಿಲ್ಲ, ನೀವು ಚೆನ್ನಾಗಿ ಓದಬೇಕು" ಎನ್ನುತ್ತಿದ್ದರು. ಮಾತ್ರವಲ್ಲದೇ "ಎಂತಹ ಸಂಕಟದ ಸಂದರ್ಭದಲ್ಲೂ ಧೈರ್ಯಗೆಡಬಾರದು" ಎಂಬ ಕಿವಿಮಾತನ್ನು ಸದಾ ಹೇಳುತ್ತಿದ್ದರು. ಇದಕ್ಕೆ ಪೂರಕವೆಂಬಂತೆ ನಾಗನರೇಶನ ತಂದೆ ಯಾವುದೇ ಸಮಸ್ಯೆ ಎದುರಾದರೂ "ದೇವ್ರಿದ್ದಾನೆ ಬಿಡಪ್ಪಾ ,ಎಲ್ಲ ಸರಿಹೋಗುತ್ತೆ" ಎಂದು ಬಿಡುತ್ತಿದ್ದ.

ನಾಗನರೇಶನ ಬಾಲ್ಯ ಕೂಡಾ ಇತರ ಮಕ್ಕಳಂತೆ ಸ್ವಾಭಾವಿಕವಾಗಿತ್ತು. ಹೆಚ್ಚಿನ ತುಂಟತನವಿದ್ದರೂ ಓದಿನಲ್ಲಿ ಮಾತ್ರ ಮುಂದಿದ್ದ. ಓರಗೆಯವರೊಂದಿಗೆ ನಡೆಯುವ ಯಾವುದೇ ಚಟುವಟಿಕೆಗಳಲ್ಲೂ ಅವನಿಗೆ ಪ್ರತಿಸ್ಪರ್ಧಿಗಳೇ ಇರಲಿಲ್ಲ. ತುಂಬಾ ಬುದ್ಧಿವಂತ ಅನ್ನಿಸಿಕೊಂಡಿದ್ದ ಕಾರಣ ಆತನ ಹಲವಾರು ತುಂಟಾಟಗಳನ್ನು ಎಲ್ಲರೂ ಮನ್ನಿಸುತ್ತಿದ್ದರು. ಅದು 1993ರ ಜನವರಿ ತಿಂಗಳು. ಸಂಕ್ರಾಂತಿ ಪ್ರಯುಕ್ತ ಶಾಲೆಗೆ ರಜೆ ಇತ್ತು. ರಜಾಕಾಲ ಕಳೆಯಲು ತಾಯಿ ಮತ್ತು ಅಕ್ಕನೊಂದಿಗೆ ನಾಗನರೇಶನು ಅಜ್ಜಿಮನೆಗೆ ಹೊರಟನು. ಅವರು ಬಸ್ಸು ನಿಲ್ದಾಣಕ್ಕೆ ಬಂದ ಕೆಲವೇ ಕ್ಷಣಗಳಲ್ಲಿ ಅದೇ ಮಾರ್ಗವಾಗಿ ನಾಗನರೇಶನ ತಂದೆಯ ಸ್ನೇಹಿತ ಲಾರಿಯನ್ನು ಓಡಿಸಿಕೊಂಡು ಬಂದರು. ಇವರನ್ನು ಕಂಡವನೇ "ಊರಿಗೆ ಬಿಡ್ತೀನಿ, ಹತ್ಕೊಳ್ಳಿ" ಎಂದರು. ತಾಯಿ ಮತ್ತು ಅಕ್ಕನೊಂದಿಗೆ ಲಾರಿ ಏರಿದ ನಾಗನರೇಶ್ ಡ್ರೈವರನ ಪಕ್ಕದಲ್ಲಿ ಕುಳಿತುಕೊಂಡನು. ಬಾಲ್ಯ ಸಹಜವಾದ ಕುತೂಹಲದಿಂದ ಡ್ರೈವರ್‌ನೊಡನೆ ಏನೇನೋ ಮಾತನಾಡುತ್ತಲೇ ಇದ್ದನು.

ಹೀಗೆ ಸಾಗುತ್ತಿದ್ದಾಗ ಅನಾಹುತ ನಡೆದೇಹೋಯಿತು. ಅದು ಕಬ್ಬಿಣದ ಉತ್ಪನ್ನಗಳನ್ನು ಸಾಗಿಸುತ್ತಿದ್ದ ಹಳೇ ಲಾರಿ. ಅದರ ನಟ್ಟು, ಬೋಲ್ಟ್‌ಗಳೆಲ್ಲ ಸಡಿಲವಾಗಿದ್ದವು. ಈ ವಿಚಾರಗಳೇನೂ ನಾಗನರೇಶನಿಗೆ ತಿಳಿದಿರಲಿಲ್ಲ. ಆತನು ಡ್ರೈವರನ

ಬಲಭಾಗದಲ್ಲಿದ್ದ ಒಂದಿಷ್ಟು ಜಾಗದಲ್ಲೇ ಕುಕ್ಕರುಗಾಲಿನಲ್ಲಿ ಕುಳಿತಿದ್ದ. ವೇಗವಾಗಿ ಸಂಚರಿಸುತ್ತಿದ್ದ ಲಾರಿಯ ಡ್ರೈವರನು ಯಾಕೋ ದಿಢೀರನೆ ಬ್ರೇಕ್ ಹಾಕಿದಾಗ ಡ್ರೈವರ್ ಕ್ಯಾಬಿನ್‌ನ ಬಾಗಿಲು ಅಚಾನಕವಾಗಿ ತೆರೆದುಕೊಂಡಿತು. ಕಣ್ಣು ಮುಚ್ಚಿ ತೆರೆಯುವುದರೊಳಗೆ ನಾಗನರೇಶ ರಸ್ತೆಗೆ ಬಿದ್ದ. ಹಿಂದೆಯೇ ಲಾರಿಯಲ್ಲಿದ್ದ ಒಂದೆರಡು ಕಬ್ಬಿಣದ ತುಂಡುಗಳು ಅವನ ಕಾಲಿನ ಮೇಲೆ ಬಿದ್ದುವು. ಸೇರಿದ ಜನರೆಲ್ಲ ಹುಡುಗನನ್ನು ಪಕ್ಕದಲ್ಲೇ ಇದ್ದ ಖಾಸಗಿ ಆಸ್ಪತ್ರೆಗೆ ಕೊಂಡೊಯ್ದರು. ಅಲ್ಲಿನ ವೈದ್ಯರು "ಇದು ಆ್ಯಕ್ಸಿಡೆಂಟ್ ಕೇಸು ತಾನೆ ? ಸೀದಾ ಸರಕಾರಿ ಆಸ್ಪತ್ರೆಗೆ ತಗೊಂಡು ಹೋಗಿ. ಯಾಕೆಂದ್ರೆ ಇದೆಲ್ಲ ಕೇಸಾಗುತ್ತೆ "ಅಂದವರೆ ಕನಿಷ್ಠ ಪ್ರಥಮ ಚಿಕಿತ್ಸೆಯನ್ನು ಕೊಡುವುದಕ್ಕೂ ನಿರಾಕರಿಸಿದರು.

ಈ ವೇಳೆಗೆ ವಿಷಯ ತಿಳಿದ ನಾಗನರೇಶನ ತಂದೆ ಅಲ್ಲಿಗೆ ಧಾವಿಸಿ ಬಂದರು. ಮಗನ ಸ್ಥಿತಿ ಕಂಡು ಅವರ ಗಂಟಲುಬ್ಬಿ ಬಂತು. ಆದರೆ 'ತಾನು ಅತ್ತರೆ ಎಲ್ಲರ ಆತಂಕ ಇನ್ನಷ್ಟು ಜಾಸ್ತಿಯಾಗಬಹುದು' ಅಂದುಕೊಂಡು ಮನದಲ್ಲೇ "ದೇವ್ರಿದ್ದಾನೆ ಬಿಡಪ್ಪಾ"ಎಂದು ಮೌನವಾದರು.

ಅನಂತರ ಅವನ ಊರಿಗೆ ಹತ್ತಿರವೇ ಇದ್ದ ಸರಕಾರಿ ಆಸ್ಪತ್ರೆಯ ವೈದ್ಯರು ಕಾಲಿಗೆ ಬ್ಯಾಂಡೇಜ್ ಸುತ್ತಿ "ಏನೂ ಆಗಿಲ್ಲ ಹೋಗ್ರಿ, ಒಂದು ವಾರದೊಳಗೆ ಎಲ್ಲಾ ಸರಿಹೋಗುತ್ತೆ "ಎಂದು ಹಾರಿಕೆಯ ಮಾತನ್ನಾಡಿಬಿಟ್ಟರು.

ಡಾಕ್ಟರ್ ಹೇಳಿದ ಒಂದು ವಾರ ಕಳೆದೇಹೋಯಿತು. ಕಾಲಿನ ಗಾಯಮಾತ್ರ ಹಾಗೇ ಉಳಿಯಿತು. ವಾಸಿಯಾಗದೆ ಕೀವು ತುಂಬಿಕೊಂಡು ಮನೆ ತುಂಬಾ ದುರ್ವಾಸನೆ ಆವರಿಸಿತು. ಗಾಬರಿಗೊಂಡ ನಾಗನರೇಶ್‌ನ ತಂದೆ ಆತನನ್ನು ಜಿಲ್ಲಾಸ್ಪತ್ರೆಗೆ ಕರೆದುಕೊಂಡು ಹೋದರು. ಆದರೆ ಕಾಲ ಮಿಂಚಿತ್ತು. ಅವನನ್ನು ಪರೀಕ್ಷಿಸಿದ ವೈದ್ಯರು "ಇಷ್ಟುದಿನ ಏನು ಮಾಡ್ತಾ ಇದ್ರಿ? ಈಗಾಗಲೇ 'ಗ್ಯಾಂಗ್ರಿನ್' ತೊಡೆಯ ತನಕ ವ್ಯಾಪಿಸಿದೆ" ಎಂದು ರೇಗಿದರು. ಈಗೇನು ದಾರಿ? ಎಂದು ಕೇಳಿದ ನಾಗನರೇಶ್‌ನ ತಂದೆಗೆ "ನಿಮ್ಮ ಮಗನ ಜೀವ ಉಳಿಯ ಬೇಕು ಅನ್ನುವುದಾದರೆ ತೊಡೆಯ ತನಕ ಕಾಲುಗಳೆರಡನ್ನೂ ಕತ್ತರಿಸಬೇಕು. ಅದು ಬಿಟ್ಟರೆ ಬೇರೆ ದಾರಿಯೇ ಇಲ್ಲ" ಎಂದರು. ಇದರಿಂದ ಬಹಳಷ್ಟು ವಿಚಲಿತರಾದರೂ ನಾಗನರೇಶನ ಅಪ್ಪ ಗಟ್ಟಿ ಮನಸ್ಸುಮಾಡಿಕೊಂಡು "ನನ್ನ ಮಗನ ಜೀವ ಉಳಿಸಿ ಡಾಕ್ಟ್ರೆ, ಕಾಲುಗಳಿಲ್ಲದಿದ್ದರೂ ಪರವಾಗಿಲ್ಲ. ಅವನನ್ನು ನಾನು ನೋಡ್ಕೋತೀನಿ" ಎಂದು ಹೇಳಿದರು.



ಮುಂದೆ ನಾಗನರೇಶನಿಗೆ ಪ್ರಜ್ಞೆ ಬಂದದ್ದು ನಾಲ್ಕು ದಿನಗಳ ನಂತರ. ಕಣ್ಣುಬಿಟ್ಟಾಗ ವಿಪರೀತ ನೋವು. "ಅರೆ! ಏನಾಯ್ತು ನನಗೆ? ಅಂದುಕೊಂಡು ಕಾಲುಗಳ ಕಡೆ ನೋಡಿದರೆ ಕಾಲುಗಳೇ ಇಲ್ಲ! ತಕ್ಷಣವೇ ಆಘಾತಕ್ಕೆ ಒಳಗಾದ ಅವನು "ಅಮ್ಮಾ...ಅಪ್ಪಾ... ನನ್ನ ಕಾಲುಗಳು ಎಲ್ಲಿ? ಏನಾಗಿದೆ ನನಗೆ?"

ಎಂದು ಕೇಳಿದನು. ಮರುಕ್ಷಣ ಅವನ ಅಮ್ಮ ಗೋಳೋ ಎಂದು ಅಳತೊಡಗಿದರೆ ತಂದೆ ಮಾತ್ರ "ಇನ್ನು ಮುಂದೆ ನೀನು ಕ್ಷಣಕ್ಷಣವೂ ಜೀವನದ ಜತೆ ಕುಸ್ತಿ ಮಾಡಬೇಕು ಮಗೂ, ಆದರೆ ಹೆದರಬೇಡ ದೇವ್ರಿದ್ದಾನೆ ಬಿಡಪ್ಪಾ" ಎಂದರು.

ಹೀಗೆ ಶಾಶ್ವತ ಅಂಗವೈಕಲ್ಯಕ್ಕೆ ಒಳಗಾದ ನಾಗನರೇಶ, ಇನ್ನೂ ಎಂಟನೆಯ ತರಗತಿಯ ವಿದ್ಯಾರ್ಥಿ. ಚಿಗರೆಯಂತೆ ಚುರುಕಾಗಿ ಓಡಾಡುತ್ತಿದ್ದ ನಾಗನರೇಶ್‌ಗೆ ಗಾಲಿಕುರ್ಚಿಯೇ ಗತಿಯಾಯಿತು. ಮಗನನ್ನು ಸ್ಕೂಲಿಗೆ ಕರೆದೊಯ್ಯುವುದು ಕಷ್ಟವಾಗುತ್ತದೆಂದು ಆತನ ತಂದೆ ಸ್ಕೂಲಿನಿಂದ ನಾಲ್ಕೇ ಹೆಜ್ಜೆ ದೂರದಲ್ಲಿದ್ದ ಬಾಡಿಗೆಯ ಮನೆಗೆ ವಾಸ್ತವ್ಯವನ್ನು ಬದಲಾಯಿಸಿದರು. ಶಾಲಾಸಮಯದಲ್ಲಿ ಶೌಚಾಲಯಕ್ಕೆ ಹೋಗಬೇಕಾದರೆ, ಒಂದೇ ಕಡೆ ಕುಳಿತು ಬೇಸರವಾದಾಗ ಸುಮ್ಮನೆ ಒಮ್ಮೆ ಮಿಸುಕಾಡಿ ಮೈ ಹಗುರಮಾಡಿಕೊಳ್ಳಬೇಕಾದರೆ ನಾಗನರೇಶನಿಗೆ ಇತರರ ಸಹಾಯ ಅಗತ್ಯವಾಗಿತ್ತು. ಆಗ ಆತನ ತಂದೆ ಬೇರೆ ದಾರಿಕಾಣದೆ ನಾಗನರೇಶನಿಗಿಂತ ಎರಡು ತರಗತಿ ಮುಂದಿದ್ದ ತನ್ನ ಮಗಳನ್ನೇ ಮೊರೆಹೋಗಬೇಕಾಯಿತು. ಆತ ಆಕೆಯನ್ನು ಕರೆದು "ಮಗಳೇ, ನಿನ್ನ ತಮ್ಮನಿಗೆ ಆಸರೆಯಾಗಿ ನೀನೂ ಅವನ ತರಗತಿಯಲ್ಲೇ ಓದುವೆಯಾ? ದಯವಿಟ್ಟು ಇಂದಿನಿಂದ ನೀನು ಎಂಟನೇ ತರಗತಿಯಲ್ಲಿ ಓದಬೇಕು" ಎಂದನು. ಆಕೆಯಾದರೋ ಎರಡು ಮಾತಿಲ್ಲದೆ ಅಪ್ಪನ ಮಾತಿಗೆ ಒಪ್ಪಿಕೊಂಡಳು. ತನ್ನ ತಮ್ಮನನ್ನು ತಾಯಿಗಿಂತ ಮಿಗಿಲಾಗಿ ನೋಡಿಕೊಂಡಳು. ಮನೆಯವರು ತನಗಾಗಿ ಪಡುತ್ತಿರುವ ಕಷ್ಟವನ್ನು ನರೇಶ್ ಕೂಡಾ ಅರ್ಥಮಾಡಿಕೊಂಡನು. 'ನನಗೆ ಕಾಲಿಲ್ಲ' ಎಂಬ ಮಾತನ್ನು ಮರೆತು ಅಪ್ಪ ಪದೇ ಪದೇ ಹೇಳುತ್ತಿದ್ದ "ದೇವ್ರಿದ್ದಾನೆ ಬಿಡಪ್ಪಾ" ಎಂಬ ಮಾತನ್ನು ನೆನಪಿಸುತ್ತಾ ಶ್ರದ್ಧೆಯಿಂದ ಓದಿದನು.

ದೇವರ ದಯೆಯೋ, ಹಿರಿಯರ ಆಶೀರ್ವಾದವೋ ನಾಗನರೇಶ ಎಸ್.ಎಸ್.ಎಲ್.ಸಿ. ಯಲ್ಲಿ ತಾಲೂಕಿಗೆ ಪ್ರಥಮ ಸ್ಥಾನದಲ್ಲಿ ತೇರ್ಗಡೆಯಾದನು. ಕಾಲುಗಳಿಲ್ಲದ ಈ ಬಾಲಕನ ಸಾಧನೆ ಸಮಾಜದ ಹಲವರ ಕಣ್ಣುತೆರೆಸಿತು. ಪತ್ರಿಕೆಗಳಲ್ಲಿ ಸುದ್ದಿಯಾಯಿತು.

ಆ ವೇಳೆಗೆ ತ್ರಿಚಕ್ರ ವಾಹನದಲ್ಲಿ ಅಡ್ಡಾಡುವ ಮಟ್ಟಿಗೆ ನಾಗನರೇಶ್ ಸುಧಾರಿಸಿಕೊಂಡಿದ್ದ. ಇತರ ವಿಷಯಗಳಿಗಿಂತ ಗಣಿತದಲ್ಲಿ ಚಾಣಾಕ್ಷನಾಗಿದ್ದ ಈ ಹುಡುಗನ ಪ್ರತಿಭೆಯನ್ನು ಕಂಡಾಗ ಭಾಸ್ಕರಲಾಲ್ ಎಂಬ ಅಧ್ಯಾಪಕರು ಇವನಿಗೆ ಸ್ಕಾಲರ್‌ಶಿಪ್‌ನ ವ್ಯವಸ್ಥೆ ಮಾಡಿಸಿದರು. ಮುಂದೆ ಚೆನ್ನೈನ ಪ್ರತಿಷ್ಠಿತ ಐ.ಐ.ಟಿ.ಕಾಲೇಜಿನಲ್ಲಿ ಆತನಿಗೆ ಕಂಪ್ಯೂಟರ್ ಇಂಜಿನಿಯರಿಂಗ್‌ಗೆ ಕಲಿಕೆಗೆ ಅವಕಾಶ ದೊರಕಿತು.

ನಾಗನರೇಶನಿಗೆ ದೊರಕಿದ ಬಹುದೊಡ್ಡ ಸೌಭಾಗ್ಯವೆಂದರೆ ಯಾರೂ ಅವನನ್ನು ಕೀಳಾಗಿ ನೋಡಲಿಲ್ಲ. ಒಂದರ್ಥದಲ್ಲಿ ಅವನು ಯಾರಿಗೂ ಅಂತಹ ಅವಕಾಶವನ್ನೇ ಒದಗಿಸಲಿಲ್ಲ. ಚೆನ್ನೈನ ಐ.ಐ.ಟಿ. ಕಾಲೇಜಿನ ಸಿಬ್ಬಂದಿಗಳು ಆತನನ್ನು ಮಗುವಿನಂತೆ ನೋಡಿಕೊಂಡರು. ನಾಗನರೇಶನ ಸಂಚಾರಕ್ಕೆ ಅನುಕೂಲವಾಗಲಿ ಎಂಬ ಒಂದೇ ಕಾರಣದಿಂದ ಆಡಳಿತ ಮಂಡಳಿಯು ಕಾಲೇಜಿಗೆ ಲಿಫ್ಟನ್ನು ಹಾಕಿಸಿತು. ಅತನ ಬಗ್ಗೆ ವಿಶೇಷ ಕಾಳಜಿ ವಹಿಸುವಂತೆ ಲಿಫ್ಟ್ ಆಪರೇಟರಿಗೆ ತಾಕೀತು ಮಾಡಿತು. ಅಷ್ಟಲ್ಲದೆ ಆತನ ಒಂದೊಂದು ಚಿಕ್ಕ ಗೆಲುವನ್ನೂ ಕಾಲೇಜಿನಲ್ಲಿ ದೊಡ್ಡ ಹಬ್ಬದಂತೆ ಆಚರಿಸಲಾಯಿತು.

ಪ್ರತಿಭಾವಂತರಿಗೆ ಮೀಸಲಾದ ಎಲ್ಲಾ ಸ್ಕಾಲರ್‌ಶಿಪ್‌ಗಳು ನಾಗನರೇಶನನ್ನು ಹುಡುಕಿಕೊಂಡು ಬಂದವು. ಆಶ್ಚರ್ಯವೆಂದರೆ ಕಾರ್ತಿಕ್ ಎಂಬ ಐ.ಐ.ಟಿ.ಯ ಮೊದಲ ರ್‍ಯಾಂಕ್ ವಿದ್ಯಾರ್ಥಿ ನಾಗನರೇಶನೊಂದಿಗೆ ಹಾಸ್ಟೆಲಿನ ರೂಮನ್ನು ಹಂಚಿಕೊಳ್ಳಲು ತಯಾರಾದ. ಹಾಸ್ಟೆಲಿನ ವಾರ್ಡನ್‌ರನ್ನು ಒತ್ತಾಯಿಸಿ ಶೌಚಾಲಯ ಜೊತೆಗಿರುವ ರೂಮನ್ನು ಪಡೆಯುವಲ್ಲಿ ಕಾರ್ತಿಕ್‌ಸಫಲನಾದ. ಒಂದೇ ಮಾತಿನಲ್ಲಿ ಹೇಳುವುದಾದರೆ ಸ್ವಲ್ಪವೂ ಸಂಕೋಚಪಡದೆ ನಾಗನರೇಶನ ಸ್ನಾನ ಶೌಚದ

ವ್ಯವಸ್ಥೆಯನ್ನೆಲ್ಲ ಕಾರ್ತಿಕ್ ನೋಡಿಕೊಂಡನು.ಇದಕ್ಕೆಲ್ಲ ಕೃತಜ್ಞತೆ ಹೇಳಲು ಅಸಮರ್ಥನಾಗಿ ನಾಗನರೇಶ ಕಣ್ತುಂಬಿಕೊಂಡಾಗ "ದೇವ್ರಿದ್ದಾನೆ ಬಿಡಪ್ಪಾ" ಎಂದು ಹೇಳಿ ಆತನ ಮುಖದಲ್ಲಿ ನಗುವರಳಿಸುವಲ್ಲಿ ಸಫಲನಾಗುತ್ತಿದ್ದನು.



ಮುಂದೆ ಐ.ಐ.ಟಿ ಕಾಲೇಜಿನಲ್ಲಿ ಅತಿ ಹೆಚ್ಚು ಅಂಕ ಪಡೆದು ಪದವಿ ಪಡೆದ ದಿನ. ನಾಗನರೇಶನಿಗೆ ಬೀಳ್ಕೊಡುಗೆ ನೀಡಲೆಂದೇ ಒಂದು ವಿಶೇಷ ಸಮಾರಂಭ ನಡೆಸಲಾಯಿತು. ಅವತ್ತಿನವರೆಗೆ ಒಮ್ಮೆಯೂ ಕಣ್ಣೀರು ಹಾಕದಿದ್ದ ನಾಗನರೇಶನು ಅಂದು ಮಾತ್ರ ಪುಟ್ಟ ಮಗುವಿನಂತೆ ಬಿಕ್ಕಳಿಸಿ ಅಳುತ್ತಾ, "ನಿಮ್ಮೆಲ್ಲರ ಕಣ್ಣುಗಳಲ್ಲಿ , ನಡವಳಿಕೆಯಲ್ಲಿ, ಪ್ರೀತಿಯಲ್ಲಿ, ಮೆಚ್ಚುಗೆಯಲ್ಲಿ, ತಮಾಷೆಯಲ್ಲಿ, ಪಿಸುಮಾತಿನಲ್ಲಿ ನನ್ನ ಗೆಳೆಯ ಕಾರ್ತಿಕ್‌ನ ಒಂದು ಬೆಚ್ಚನೆಯ ಸ್ಪರ್ಶದಲ್ಲಿ ನಾನು ದೇವರನ್ನು ಕಂಡೆ. ನಿಮ್ಮೆಲ್ಲರ ಪ್ರೀತಿಗೆ ನಾನು ಋಣಿ. ನಾನು ವಿಕಲಚೇತನನೆಂದು ತಿಳಿದು ನನಗೆ ಚಂದದ ವ್ಹೀಲ್‌ಚೇರ್ ಮತ್ತು ತ್ರಿಚಕ್ರ ವಾಹನ ಕೊಟ್ರಲ್ಲ, ಆ ದಾನಿಗಳಿಗೂ ನಾನು ಋಣಿ ...." ಮುಂದೆ ನಾಗನರೇಶನಿಗೆ ಮಾತುಗಳು ಹೊರಡಲಿಲ್ಲ.

ಸಾಧಾರ

## ಚಟುವಟಿಕೆಗಳು

### ಚರ್ಚಿಸಿರಿ

- ನಿಮ್ಮ ಹತ್ತಿರದ ಸರಕಾರಿ ಆಸ್ಪತ್ರೆಯು ನೀಡುವ ಸೇವೆಗಳ ಬಗ್ಗೆ ನಿಮ್ಮ ಅಭಿಪ್ರಾಯವೇನು? ತರಗತಿಯಲ್ಲಿ ಚರ್ಚಿಸಿರಿ.

### ಉತ್ತರಿಸಿರಿ

- ನಾಗನರೇಶ ಯಾವ ಉದ್ಯೋಗ ಮಾಡುತ್ತಿದ್ದಾನೆ?
- ನಾಗನರೇಶನಿಗೆ ಹೇಗೆ ಆತ್ಮ ವಿಶ್ವಾಸ ಮೂಡಿತು?
- ನಾಗನರೇಶನು ತನ್ನ ಕಾಲುಗಳನ್ನು ಕಳೆದುಕೊಂಡದ್ದು ಹೇಗೆ?
- ನಾಗನರೇಶನಿಗೆ ಅವನ ಅಕ್ಕ ಹೇಗೆ ಆಸರೆಯಾದಳು?
- ನಾಗನರೇಶನು ಬೀಳ್ಕೊಡುವ ಸಂದರ್ಭದಲ್ಲಿ ಆಡಿದ ಮಾತುಗಳೇನು?

### ಲೇಖನ ತಯಾರಿಸಿರಿ

- ನಾಗನರೇಶನ ಸಾಧನೆಗಳನ್ನು ತಿಳಿಸುವ ಲೇಖನವನ್ನು ತಯಾರಿಸಿರಿ.

### ಅಭಿಪ್ರಾಯ ಟಿಪ್ಪಣಿ ಬರೆಯಿರಿ

- "ದೇವ್ರಿದ್ದಾನೆ ಬಿಡಪ್ಪಾ" ಈ ಮಾತಿನ ಬಗ್ಗೆ ನಿಮ್ಮ ಅಭಿಪ್ರಾಯವೇನು? ಟಿಪ್ಪಣಿ ಬರೆಯಿರಿ.


### ಸಂದರ್ಶನ ಪ್ರಶ್ನಾವಳಿ ತಯಾರಿಸಿರಿ

- ವಿಕಲಚೇತನರಾಗಿದ್ದುಕೊಂಡು ವಿಶೇಷ ಸಾಧನೆ ಮಾಡಿದ ನಾಗನರೇಶನಂತಹ ವ್ಯಕ್ತಿಗಳು ನಿಮ್ಮ ಊರಲ್ಲಿಯೂ ಇರಬಹುದಲ್ಲವೇ?ಅವರೊಡನೆ ಸಂದರ್ಶನ ನಡೆಸಲು ಯೋಗ್ಯವಾದ ಸಂದರ್ಶನ ಪ್ರಶ್ನಾವಳಿ ತಯಾರಿಸಿರಿ.

### ಘೋಷಣವಾಕ್ಯ ತಯಾರಿಸಿರಿ

- ವಿಕಲಚೇತನರು ನಮ್ಮವರೆ, ಅವರಿಗೆ ಧೈರ್ಯ ನೀಡುವುದು ನಮ್ಮ ಕರ್ತವ್ಯವಾಗಿದೆ. ಅವರನ್ನು ಪ್ರೋತ್ಸಾಹಿಸುವ ಘೋಷಣ ವಾಕ್ಯಗಳನ್ನು ಬರೆಯಿರಿ.

  ಉದಾ :




### ವಾಕ್ಯ ರಚಿಸಿರಿ

- ಅಡಿಗೆರೆ ಎಳೆದ ಪದವನ್ನು ಉಪಯೋಗಿಸಿಕೊಂಡು ಬೇರೆ ವಾಕ್ಯಗಳನ್ನು ರಚಿಸಿರಿ.
  - ಮರ ಏರುವ <u>ಸಮರ್ಥ</u> ವ್ಯಕ್ತಿಗಳಲ್ಲಿ ಗಿರೀಶನೂ ಒಬ್ಬನಾಗಿದ್ದನು.
  - ರಮೇಶನು ಓಟದ ಸ್ಪರ್ಧೆಯಲ್ಲಿ ಗೆಲ್ಲಲು <u>ವಿಫಲ</u>ನಾದನು.
  - ಎತ್ತಿನ ಗಾಡಿಯು <u>ನಿಧಾನ</u>ವಾಗಿ ಚಲಿಸುತ್ತಿತ್ತು.
  - ಹೂದೋಟದಲ್ಲಿ ಅರಳಿದ ಹೂಗಳು <u>ಸುವಾಸನೆ</u> ಬೀರುತ್ತಿದ್ದುವು.

# ಕೊಡದಪ್ಪ ಬಿಡದಪ್ಪ

ಒಂದಾನೊಂದು ಊರಿನಲ್ಲಿ ಕೊಡದಪ್ಪ ಎಂಬ ಗೃಹಸ್ಥನಿದ್ದನು. 'ತಾನು ಬಡವರಿಗೆ ಊಟ ಹಾಕುವ ವ್ರತ ಹಿಡಿದಿದ್ದೇನೆ' ಎಂದು ಅವನು ಜನರನ್ನು ನಂಬಿಸಿ, ಅವರಿಂದ ತನ್ನ ಧರ್ಮಕಾರ್ಯಕ್ಕೆ ಸಹಾಯ ಕೇಳುತ್ತಿದ್ದನು. ಜನರು ಅವನ ಮಾತನ್ನು ನಂಬಿ ಹಣ, ದವಸಧಾನ್ಯ ಮತ್ತು ತರಕಾರಿಗಳನ್ನು ದಾನವಾಗಿ ಕೊಡುತ್ತಿದ್ದರು.

ಕೊಡದಪ್ಪ ದಿನನಿತ್ಯ ಸುಳ್ಳು ಹೇಳಿ ಸಂಪಾದಿಸಿದ ಹಣ ಮತ್ತು ಆಹಾರ ವಸ್ತುಗಳನ್ನು ಮನೆಗೆ ಹೊತ್ತು ತರುತ್ತಿದ್ದ. 'ಜನರನ್ನು ಹೇಗೆ ಮರುಳು ಮಾಡಿದೆ' ಎಂದು ಅವನು ಹೆಂಡತಿಯ ಮುಂದೆ ಬಡಾಯಿ ಕೊಚ್ಚುತ್ತಿದ್ದ. ಹೆಂಡತಿ ಅವನ ಚಾತುರ್ಯವನ್ನು ಮೆಚ್ಚಿ ಹೊಗಳುತ್ತಿದ್ದಳು. ಇಷ್ಟೆಲ್ಲ ಸಂಪಾದನೆ ಇದ್ದರೂ ಕೊಡದಪ್ಪ ಮತ್ತು ಅವನ ಹೆಂಡತಿ ಮಹಾ ಜಿಪುಣರಾಗಿದ್ದರು. ಬಡವರು ಅವರ ಮನೆ ಬಾಗಿಲಿಗೆ ಊಟಕ್ಕೆ ಬಂದರೆ ತಪ್ಪಿಯೂ ಒಂದು ತುತ್ತು ಅನ್ನ ಹಾಕುತ್ತಿರಲಿಲ್ಲ. ಗಂಡಹೆಂಡತಿಯರು ಅವರಿಗೆ ಏನಾದರೂ ನೆವ ಹೇಳಿ ಸಾಗಹಾಕುತ್ತಿದ್ದರು.

ಕೊಡದಪ್ಪ ಬೇಡಿ ತಂದ ಅಕ್ಕಿ, ದವಸಧಾನ್ಯಗಳಲ್ಲಿ ಒಂದಿಷ್ಟನ್ನು ಮಾತ್ರ ಬಳಸಿ, ಉಳಿದದ್ದನ್ನು ಪರಿಚಯದ ಅಂಗಡಿಯವನಿಗೆ ಮಾರಿ, ಸಾಕಷ್ಟು ಹಣ ಕೂಡಿಟ್ಟಿದ್ದ. ಅವನು ಯಾವುದೇ ತೊಂದರೆ ಇಲ್ಲದೆ ಜೀವನ ಸಾಗಿಸಬಹುದಿತ್ತು. ಆದರೂ ದಿನನಿತ್ಯ ಮನೆಮನೆಗೆ ದಾನ ಬೇಡಲು ಹೋಗುವ ಕಾಯಕ ಮಾತ್ರ ಬಿಟ್ಟಿರಲಿಲ್ಲ.

ಸಮೀಪದ ಒಂದು ಊರಿನಲ್ಲಿ ಬಿಡದಪ್ಪ ಎಂಬ ಬುದ್ಧಿವಂತನಿದ್ದನು. ಅವನು ಎಂತಹ ಜಿಪುಣನ ಬಳಿಯೂ ಊಟ ಗಿಟ್ಟಿಸುವುದರಲ್ಲಿ ನಿಪುಣನಾಗಿದ್ದ. ಕೊಡದಪ್ಪನ ಕೀರ್ತಿ ಅವನ ಕಿವಿಗೆ ಬಿತ್ತು. ಅವನಿಂದಲೂ ಒಂದು ಹೊತ್ತಿನ ಊಟ ವಸೂಲಿ ಮಾಡಿ ಬರುತ್ತೇನೆಂದು ಬಿಡದಪ್ಪ ಹೊರಟ.

ಬಿಡದಪ್ಪ ಕೊಡದಪ್ಪನ ಮನೆ ಬಾಗಿಲಿಗೆ ತಲುಪಿದಾಗ ಮಧ್ಯಾಹ್ನ ಕಳೆದಿತ್ತು. ಕೊಡದಪ್ಪ ಆಗ ತಾನೆ ಊಟ ಮುಗಿಸಿ ವಿರಮಿಸುತ್ತಿದ್ದ. ಬಾಗಿಲು ತಟ್ಟಿದ ಶಬ್ದ ಕೇಳಿ ಅಸಹನೆಯಿಂದ ಬಾಗಿಲು ತೆರೆದ. ಬಾಗಿಲ ಬಳಿ ನಿಂತ ಬಡವನನ್ನು ನೋಡಿ "ಯಾರಯ್ಯಾ ನೀನು! ಈ ಹೊತ್ತಿನಲ್ಲಿ ಇಲ್ಲೇನು ಮಾಡುತ್ತಿದ್ದೀ?" ಎಂದು ವಿಚಾರಿಸಿದ. "ಅಯ್ಯಾ, ನೀವು ಮಹಾದಾನಿ ಎಂದು ಕೇಳಿದ್ದೇನೆ. ಹಸಿದು ಬಂದಿರುವ ಈ ಬಡವನಿಗೆ ಒಂದು ತುತ್ತು ಊಟ ಹಾಕಿ" ಎಂದು ಬಿಡದಪ್ಪ ಕೇಳಿಕೊಂಡ.

"ಅಯ್ಯೋ, ನಾನು ದಿನಾ ಹತ್ತು ಮಂದಿ ಬಡವರಿಗೆ ಊಟ ಹಾಕುತ್ತೇನೆ. ನೀವು ಬರುವಾಗ ತಡವಾಯಿತು. ನಾನು ಇವತ್ತಿನ ಹತ್ತು ಜನರಿಗೆ ಊಟ ಕೊಟ್ಟಾಗಿದೆ. ಊಟ ಬೇಕಿದ್ದರೆ ನಾಳೆ ಬೇಗ ಬನ್ನಿ. ಊಟ ಹಾಕುತ್ತೇನೆ" ಎಂದು ಕೊಡದಪ್ಪ ಹೇಳಿದ. ಇದು ಕೊಡದಪ್ಪ ಎಲ್ಲರಿಗೂ ಹೇಳುವ ಸುಳ್ಳಾಗಿತ್ತು. ಅವನ ಅಭ್ಯಾಸ ತಿಳಿದಿದ್ದ ಊರಿನವರು ಯಾರೂ ಅವನ ಬಳಿ ಊಟ ಕೇಳಲು ಬರುತ್ತಿರಲಿಲ್ಲ. ಪರದೇಶದಿಂದ ಬಂದ ದಾರಿಹೋಕರು ಊಟ ಕೇಳಲು ಮರಳಿ ಬರಲಾರರು ಎಂದು ಅವನ ಲೆಕ್ಕಾಚಾರವಾಗಿತ್ತು.

ಬಿಡದಪ್ಪ ಸುಮ್ಮನೆ ಹೊರಟು ಹೋದ. ಆದರೆ ಅವನು ಅಷ್ಟು ಸುಲಭಕ್ಕೆ ಸೋಲೊಪ್ಪುವ ಆಸಾಮಿಯಾಗಿರಲಿಲ್ಲ. ಮರುದಿನ ಮಧ್ಯಾಹ್ನಕ್ಕೆ ಮೊದಲೇ ಬಂದು ಕೊಡದಪ್ಪನ ಮನೆಯ ಬಾಗಿಲು ತಟ್ಟಿದ. "ಅಯ್ಯಾ, ನೀವು ಹೇಳಿದಂತೆ

ಇಂದು ನಾನು ಬೇಗ ಬಂದಿದ್ದೇನೆ. ಇದುವರೆಗೆ ನಿಮ್ಮ ಹತ್ತು ಬಡವರಲ್ಲಿ ಯಾರೂ ಊಟಕ್ಕೆ ಬಂದಹಾಗಿಲ್ಲ. ನನಗೆ ಊಟ ಹಾಕಿ ನಿಮ್ಮ ನಿತ್ಯವ್ರತ ಈಡೇರಿಸಿ" ಎಂದು ವಿನಮ್ರವಾಗಿ ಹೇಳಿದ.

ಕೊಡದಪ್ಪ ದಂಗಾಗಿ ನಿಂತ. ಇದುವರೆಗೆ ಯಾರೂ ಅವನ ಮನೆಗೆ ಎರಡನೆಯ ಬಾರಿ ಊಟ ಕೇಳಲು ಬಂದಿರಲಿಲ್ಲ. ಈತ ಮಧ್ಯಾಹ್ನಕ್ಕೆ ಮೊದಲೇ ಬಂದಿರುವ ಕಾರಣ ಬಡವರ ನಿತ್ಯ ಸಮಾರಾಧನೆ ಮುಗಿದಿದೆ ಎಂದು ಸಾಗಹಾಕುವಂತಿರಲಿಲ್ಲ. ಹಾಗೆಂದು ಈ ಮೊಂಡು ವ್ಯಕ್ತಿಗೆ ಊಟ ಹಾಕುವುದೂ ಅವನಿಗೆ ಇಷ್ಟವಿರಲಿಲ್ಲ. ಅವನ ತಲೆಯಲ್ಲಿ ಒಂದು ಉಪಾಯ ಹೊಳೆಯಿತು.

"ಅಯ್ಯಾ, ನಿನ್ನೆ ರಾತ್ರಿ ನನ್ನ ಪತ್ನಿ ಜ್ವರದಿಂದ ಹಾಸಿಗೆ ಹಿಡಿದಿದ್ದಾಳೆ. ಅವಳಿನ್ನೂ ಚೇತರಿಸಿಕೊಂಡಿಲ್ಲ. ಹೀಗಾಗಿ ನನ್ನ ನಿತ್ಯ ಸಮಾರಾಧನೆಯ ವ್ರತವನ್ನು ಅವಳು ಗುಣವಾಗುವ ತನಕ ಮುಂದೂಡಿದ್ದೇನೆ. ದಯವಿಟ್ಟು ಕೆಲವು ದಿನಗಳ ಕಾಲ ಬರಲೇಬೇಡಿ" ಎಂದು ಹೇಳಿದ. ಬಿಡದಪ್ಪನಿಗೆ ಇದು ನಾಟಕ ಎಂದು ತಿಳಿದಿತ್ತು. ಆದರೂ ಮುಖದಲ್ಲಿ ಕಳವಳ ಮತ್ತು ಸಂತಾಪದ ಭಾವ ತೋರಿಸಿದ. "ಸ್ವಾಮೀ , ನಿಮ್ಮ ಮನೆಯಾಕೆಯ ಆರೋಗ್ಯ ಕೆಟ್ಟಿರುವುದು ದುಃಖದ ಸಂಗತಿ. ಹಾಗೆಂದು ಬಡವರಿಗೆ ಊಟ ಹಾಕುವ ನಿತ್ಯವ್ರತವನ್ನು ಬಿಟ್ಟುಬಿಡುವುದು ಮಹಾಪಾಪ. ನಿಮಗೆ ನಾನು ಸಹಾಯ ಮಾಡಬಲ್ಲೆ. ನಾನು ಅಡುಗೆ ಮಾಡುವುದರಲ್ಲಿ ನಿಪುಣ. ನೂರಾರು ಜನರಿಗೂ ಊಟ ತಯಾರಿಸಿ ಬಡಿಸಬಲ್ಲೆ. ನಿತ್ಯ ಸಮಾರಾಧನೆ ತಯಾರಿಸಲು ನಾನು ಸಹಾಯ ಮಾಡುತ್ತೇನೆ"ಎಂದ.

ಕೊಡದಪ್ಪನಿಗೆ ಬೇರೇನೂ ಸಬೂಬು ಹೇಳಲು ಸಾಧ್ಯವಿರಲಿಲ್ಲ. 'ಈ ಕಿರಿಕಿರಿಯ ಮನುಷ್ಯನಿಂದ ಊಟ ತಯಾರಿಸಿಕೊಂಡು ಅನಂತರ ಅವನನ್ನು ಹೇಗಾದರು ಸಾಗಹಾಕುತ್ತೇನೆ' ಎಂದು ಮನಸ್ಸಿನಲ್ಲೇ ನಿರ್ಧರಿಸಿದ. "ಅಯ್ಯಾ ನೀವು ಬಂದಿರುವುದು ನನ್ನ ಭಾಗ್ಯವೇ ಸರಿ. ಬನ್ನಿ ಒಳಗೆ ಬನ್ನಿ" ಎಂದು ಅವನನ್ನು ಅಡುಗೆ ಕೋಣೆಗೆ ಕರೆದೊಯ್ದ. ಅವರು ಒಳಗೆ ಬಂದಾಗ ಮನೆಯಾಕೆ ಹಾಸಿಗೆಯಲ್ಲಿ ಮುಸುಕು ಎಳೆದುಕೊಂಡು ಬಿದ್ದಿದ್ದಳು.

ಕೊಡದಪ್ಪನ ಮನೆಯಲ್ಲಿ ಅಡುಗೆಗೆ ಬೇಕಾಗಿರುವುದೆಲ್ಲ ಧಾರಾಳವಾಗಿ ಇತ್ತು. ಅವನು ಆ ದಿನ ತಾನೇ ಬೇಡಿ ತಂದಿದ್ದ ಹಸಿ ತರಕಾರಿಗಳೂ ಇದ್ದುವು. ಬಿಡದಪ್ಪ ಅಡುಗೆಯಲ್ಲಿ ಎತ್ತಿದ ಕೈ. ಅವನು ಹಲವಾರು ರುಚಿಕರವಾದ ಭಕ್ಷ್ಯಗಳನ್ನು ಮಾಡಿದ. ಕೊನೆಗೆ ಬಾದಾಮಿ, ಗೇರು ಬೀಜ ಹಾಕಿ ಶಾವಿಗೆ ಪಾಯಸವನ್ನೂ ತಯಾರಿಸಿದ. ಕೊಡದಪ್ಪ ಅವನಿಗೆ ಸಹಾಯ ಮಾಡುವ ನೆಪದಲ್ಲಿ ಅಡುಗೆ ಕೋಣೆಯಲ್ಲೇ ನಿಂತಿದ್ದ. ಈ ತಲೆತಿರುಕನನ್ನು ಹೇಗೆ ಓಡಿಸುವುದೆಂಬುದೇ ಅವನ ತಲೆಯಲ್ಲಿ ಕೊರೆಯುತ್ತಿತ್ತು. ಇತ್ತ ಅಡುಗೆ ತಯಾರಾಗುವ ಹೊತ್ತಿಗೆ ಅವನ ತಲೆಯಲ್ಲಿ ಒಂದು ಉಪಾಯ ಹೊಳೆಯಿತು. "ಅಯ್ಯಾ, ನಿಮ್ಮ ಸಹಕಾರದಿಂದ ಊಟ ತಯಾರಾಯಿತು. ಆದರೆ ಊಟಕ್ಕೆ ಎಲೆ ಇಲ್ಲ. ದಯವಿಟ್ಟು ಮಾರುಕಟ್ಟೆಯಿಂದ ನಾಲ್ಕು ಎಲೆ ತನ್ನಿ" ಎಂದು ಬಿಡದಪ್ಪನ ಕೈಗೆ ಒಂದು ಕಾಸು ಕೊಟ್ಟ. ಬಿಡದಪ್ಪ ಕಾಸು ಹಿಡಿದು ಎಲೆ ತರಲು ಹೋದ. "ಲೇ ಆಗೋದೆಲ್ಲಾ ಒಳ್ಳೆಯದಕ್ಕೇ. ಆ ಮೂರ್ಖ ನಮಗಾಗಿ ಒಳ್ಳೆಯ ಅಡುಗೆ ತಯಾರಿಸಿದ್ದಾನೆ. ದಿನಾ ನಮಗೆ ಇಂತಹ ಒಬ್ಬೊಬ್ಬ ಮೂರ್ಖ ಸಿಗುತ್ತಿದ್ದರೆ ಚೆನ್ನಾಗಿತ್ತು. ಈಗ ಅವನನ್ನು ಎಲೆ ತರಲು ಕಳಿಸಿದ್ದೇನೆ. ಬಾಗಿಲು ಮುಚ್ಚಿ ಅವನನ್ನು ಓಡಿಸಬಹುದು, ಆದರೆ ಅದು ಸರಿಹೋಗುವುದಿಲ್ಲ. ತಾನಾಗಿ ಹೊರಟು ಹೋಗುವಂತೆ ಮಾಡಬೇಕು. ನನಗೊಂದು ಉಪಾಯ ಹೊಳೆದಿದೆ. ಅವನು ಮನೆಗೆ ಬರುತ್ತಲೇ ನಾವಿಬ್ಬರೂ ಜಗಳ ಮಾಡೋಣ, ನಾನು ನಿನಗೆ ಹೊಡೆದಂತೆ ಮಾಡುತ್ತೇನೆ. ನೀನು ಬೊಬ್ಬೆ ಹಾಕು, ಕೂಗು, ಅರಚು. ನಮ್ಮ  ಜಗಳ ನೋಡಿ ಅವನಿಗೆ ಬೇಸರವಾಗಿ ಹೊರಟು ಹೋಗುತ್ತಾನೆ. ಆಮೇಲೆ ನಾವಿಬ್ಬರೇ

ಕುಳಿತು ಬಿಸಿ ಊಟ ಮಾಡಬಹುದು" ಎಂದು ಹೇಳಿದ.

ತುಸು ಹೊತ್ತಿನಲ್ಲಿ ಬಿಡದಪ್ಪ ಎಲೆ ಹಿಡಿದುಕೊಂಡು ಬಂದ. ಅವನು ಮನೆಯ ಮೆಟ್ಟಲು ಹತ್ತುವುದನ್ನು ಕಿಟಕಿಯಿಂದ ನೋಡಿದ ಕೊಡದಪ್ಪ ಹೆಂಡತಿಗೆ ಸನ್ನೆ ಮಾಡಿದ. ಹೆಂಡತಿ ಗಂಟಲು ಹರಿಯುವಂತೆ ಬೊಬ್ಬೆ ಹೊಡೆದಳು. "ನೀವು ಬಡವರಿಗೆ ಊಟ ಹಾಕಿ ಮನೆ ಖಾಲಿ ಮಾಡುತ್ತಿದ್ದೀರಿ. ನಾನು ಹಾಸಿಗೆ ಹಿಡಿದಾಗಲೂ ನಿಮ್ಮ ಹಾಳು ವ್ರತ ನಡೆಯಬೇಕೆ? ನಿಮಗೆ ನಾಚಿಕೆ ಆಗಬೇಕು. ಹೊಟ್ಟೆಬಾಕರಿಗೆ ಊಟಹಾಕಿ ಹೆಂಡತಿ ಮಕ್ಕಳನ್ನು ಬೀದಿ ಪಾಲಾಗಿ ಮಾಡುತ್ತಿದ್ದೀರಿ" ಎಂದು ಅರಚತೊಡಗಿದಳು.



“ಕುಲಗೆಟ್ಟ ಹೆಂಗಸೆ ! ನಾನು ವ್ರತ ಮಾಡಿರುವುದು ಕುಲದ ಉದ್ಧಾರಕ್ಕಾಗಿ” ಎಂದು ದನಿಯೇರಿಸಿ ಎರಡೂ ಕೈಗಳಿಂದ ನೆಲಕ್ಕೆ ರಪರಪನೆ ಹೊಡೆದ. ಹೆಂಡತಿ ತನಗೇ ಏಟು ಬಿತ್ತು ಎನ್ನುವಂತೆ ಅರಚಿದಳು. ಬಿಡದಪ್ಪ ಬೀದಿಯಲ್ಲಿ ನಿಂತುಕೊಂಡೇ ಇವರಿಬ್ಬರ ಜಗಳ ಕೇಳಿದ. ನಡುವೆ ಮೂಗು ತೂರಿಸದೆ ಮೆತ್ತಗೆ ಮನೆಯೊಳಗೆ ನಡೆದು ಅಟ್ಟದ ಮೇಲೇರಿ ಕುಳಿತ.

ತುಸು ಹೊತ್ತಿನ ಬಳಿಕ ಕೊಡದಪ್ಪನಿಗೆ ಒದರಾಡಿ ಆಯಾಸವಾಗಿ ಗಂಟಲು ನೀವುತ್ತ ಹೊರಗೆ ಬಂದ. ಬಾಗಿಲಲ್ಲಿ ಅತಿಥಿ ಇರಲಿಲ್ಲ. ಹೊರಗೆ ಇಣುಕಿ ನೋಡಿದ. ಅತಿಥಿ ಕಾಣಿಸಲಿಲ್ಲ. ಸಂತೋಷದಿಂದ ಬಾಗಿಲು ಮುಚ್ಚಿ ಚಿಲಕ ಜಡಿದ. ಹೆಂಡತಿಗೆ ಸುದ್ದಿ ತಿಳಿಸಿದ. “ಕೊನೆಗೂ ಹಾಳು ಆಸಾಮಿಯನ್ನು ಓಡಿಸಿದೆವು. ಆರಾಮವಾಗಿ ಭೋಜನ ಮಾಡಬಹುದು.” ಎಂದನು. ಅಷ್ಟರಲ್ಲಿ ಹೆಂಡತಿ ಲಗುಬಗೆಯಿಂದ ಬಟ್ಟೆ ಬದಲಿಸಿಕೊಂಡು ಬಂದಳು. ನೆಲದಲ್ಲಿ ಎರಡು ಎಲೆ ಹಾಕಿ ಊಟ ಬಡಿಸಿದಳು.

ಇದೆಲ್ಲವನ್ನು ಅಟ್ಟದಲ್ಲಿ ಕುಳಿತು ನೋಡುತ್ತಿದ್ದ ಬಿಡದಪ್ಪ ಕೆಳಗೆ ಹಾರಲು ಸಮಯ ಕಾಯುತ್ತಿದ್ದ. ಕೊಡದಪ್ಪ “ಲೇ, ನಾನು ನೋವು ಮಾಡದೇ ನಿನಗೆ ಹೊಡೆದದ್ದು ಚೆನ್ನಾಗಿರಲಿಲ್ಲವೇ?” ಎಂದು ಕೇಳಿದ. “ನಾನು ಕಣ್ಣೀರು ಹಾಕದೇ ಅತ್ತದ್ದು ಗಮ್ಮತ್ತಾಗಿರಲಿಲ್ಲವೇ?” ಎಂದು ಹೆಂಡತಿಯೂ ಹೆಮ್ಮೆಯಿಂದ ಹೇಳಿದಳು.

“ನಾನು ಊಟ ಬಿಡದೆ ಮರಳಿ ಬಂದಿದ್ದು ಎಲ್ಲಕ್ಕಿಂತ ಗಮ್ಮತ್ತು ಅಲ್ಲವೇ” ಎನ್ನುತ್ತ ಬಿಡದಪ್ಪ ಅಟ್ಟದಿಂದ ಕೆಳಗೆ ನೆಗೆದ. ಕೊಡದಪ್ಪ ಮತ್ತು ಅವನ ಹೆಂಡತಿ ಗರಬಡಿದವರಂತೆ ಕುಳಿತರು. ಬಿಡದಪ್ಪ ತನಗೊಂದು ಎಲೆ ಹಾಕಿ ಬಡಿಸಿಕೊಂಡ. ಕೊಡದಪ್ಪನಿಂದ ಊಟ ಗಿಟ್ಟಿಸಿಕೊಂಡ ಖುಷಿಯಲ್ಲಿ ಗಮ್ಮತ್ತಾಗಿ ಭೋಜನ ಮಾಡಿದ.

## ಚಟುವಟಿಕೆಗಳು

### ಓದಿರಿ

- ಇಷ್ಟವಾದ ಭಾಗವನ್ನು ತರಗತಿಯಲ್ಲಿ ಬಾಯ್ದೆರೆಯಾಗಿ ಓದಿರಿ.

### ಚರ್ಚಿಸಿರಿ

- ‘ವಂಚನೆ ಯಾವಾಗಲೂ ನಡೆಯದು’ಈ ಮಾತಿನ ಬಗ್ಗೆ ನಿಮ್ಮ ಅಭಿಪ್ರಾಯವೇನು? ಚರ್ಚಿಸಿರಿ.

### ಉತ್ತರಿಸಿರಿ

- ಕೊಡದಪ್ಪನು ಜನರಿಂದ ಯಾವುದಕ್ಕಾಗಿ ಸಹಾಯ ಕೇಳುತ್ತಿದ್ದನು?
- ಬಿಡದಪ್ಪನು ಕೊಡದಪ್ಪನ ಮನೆಗೆ ಬಂದು ಏನೆಂದು ಕೇಳಿದನು?
- ಕೊಡದಪ್ಪನು ಮನೆಬಾಗಿಲಿಗೆ ಊಟಕ್ಕೆ ಬಂದವರೊಡನೆ ಹೇಳುವ ಸುಳ್ಳು ಏನಾಗಿತ್ತು?
- ಬಿಡದಪ್ಪನು ಎಲೆ ಹಿಡಿದುಕೊಂಡು ಬಂದಾಗ ಕೊಡದಪ್ಪ ಮತ್ತು ಅವನ ಹೆಂಡತಿ ಮಾಡಿದ ಉಪಾಯವೇನು?

## ಸಂಭಾಷಣೆ ರಚಿಸಿರಿ

- ಕೊಡದಪ್ಪನ ಮನೆಗೆ ಬಿಡದಪ್ಪ ಬಂದಾಗ ಅವರೊಳಗೆ ನಡೆದ ಮಾತುಕತೆಯನ್ನು ಸಂಭಾಷಣ ರೂಪದಲ್ಲಿ ಬರೆಯಿರಿ.

## ಸಂದರ್ಭ ಬರೆಯಿರಿ

- "ಲೇ, ನಾನು ನೋವು ಮಾಡದೇ ನಿನಗೆ ಹೊಡೆದದ್ದು ಚೆನ್ನಾಗಿರಲಿಲ್ಲವೇ?" ಈ ಮಾತಿನ ಸಂದರ್ಭವನ್ನು ವಿವರಿಸಿರಿ.

## ಊಹಿಸಿ ಬರೆಯಿರಿ

- ಬಿಡದಪ್ಪ ಅಟ್ಟದಲ್ಲಿ ಅಡಗಿ ಕುಳಿತುಕೊಂಡದ್ದು ಕೊಡದಪ್ಪನಿಗೆ ಕಾಣುತ್ತಿದ್ದರೆ ಏನಾಗುತ್ತಿತ್ತು? ಊಹಿಸಿ ಬರೆಯಿರಿ.

## ವಾಕ್ಯಗಳನ್ನು ರಚಿಸಿರಿ

- ಇಲ್ಲಿ ನೀಡಲಾದ ವಾಕ್ಯಗಳಲ್ಲಿ ಅಡಿಗೆರೆ ಎಳೆದ ಪದಗಳು ನಾಮವಿಶೇಷಣಗಳಾಗಿವೆ. ಈ ರೀತಿ ಇತರ ನಾಮವಿಶೇಷಣಗಳನ್ನು ಬಳಸಿಕೊಂಡು ಬೇರೆ ವಾಕ್ಯಗಳನ್ನು ರಚಿಸಿರಿ.
  - ಈ <u>ಮೊಂಡು</u> ವ್ಯಕ್ತಿಗೆ ಊಟ ಹಾಕಲು ಅವನಿಗೆ ಇಷ್ಟವಿರಲಿಲ್ಲ.
  - <u>ಬುದ್ಧಿವಂತ</u>ನಾದ ಬಿಡದಪ್ಪ ಕೊಡದಪ್ಪನ ಮನೆಗೆ ಊಟಕ್ಕೆ ಬಂದನು.

## ಲೇಖನ ಚಿಹ್ನೆಗಳನ್ನು ಬಳಸಿರಿ

- ಲೇಖನ ಚಿಹ್ನೆಗಳನ್ನು ಬಳಸಿಕೊಂಡು ಕೆಳಗಿನ ಪಾರಾವನ್ನು ಸರಿಪಡಿಸಿ ಬರೆಯಿರಿ.

  ಅಯ್ಯಾ ನಿನ್ನೆ ರಾತ್ರಿ ನನ್ನ ಪತ್ನಿ ಜ್ವರದಿಂದ ಹಾಸಿಗೆ ಹಿಡಿದಿದ್ದಾಳೆ ಅವಳಿನ್ನೂ ಚೇತರಿಸಿಕೊಂಡಿಲ್ಲ ಹೀಗಾಗಿ ನನ್ನ ನಿತ್ಯ ಸಮಾರಾಧನೆಯ ವ್ರತವನ್ನು ಅವಳಿಗೆ ಗುಣವಾಗುವತನಕ ಮುಂದೂಡಿದ್ದೇನೆ ಹೀಗಾಗಿ ದಯವಿಟ್ಟು ಕೆಲವು ದಿನಗಳ ಕಾಲ ಬರಲೇಬೇಡಿ ಎಂದು ಹೇಳಿದ ಬಿಡದಪ್ಪನಿಗೆ ಇದು ನಾಟಕವೆಂದು ತಿಳಿದಿತ್ತು.

## ಕಲಿಕಾ ಸಾಧನೆಗಳು

- ಆಲಿಸಿ ಓದಿ ತಿಳಿದ ವಿಚಾರಗಳನ್ನು ತರ್ಕಬದ್ಧವಾಗಿ ವಿಶ್ಲೇಷಿಸಿ ಸ್ವಂತ ಅಭಿಪ್ರಾಯಗಳನ್ನು ವಾಚಿಕವಾಗಿ ಮತ್ತು ಲಿಖಿತವಾಗಿ ಪ್ರಕಟಿಸುವುದು.
- ಗದ್ಯ–ಪದ್ಯಗಳನ್ನು ಆಶಯ ಸ್ಪಷ್ಟತೆಯೊಂದಿಗೆ ನಿರರ್ಗಳವಾಗಿ ಮತ್ತು ಸ್ಫುಟತೆಯೊಂದಿಗೆ ಓದುವುದು ಮತ್ತು ಪ್ರಧಾನ ಆಶಯಗಳನ್ನು ಬಾಯ್ದೆರೆಯಾಗಿ ಮಂಡಿಸುವುದು.
- ಪದಗಳು, ಪದಪ್ರಯೋಗಗಳು, ಗಾದೆಗಳು, ಶೈಲಿಗಳು ಮೊದಲಾದ ಭಾಷಾ ಘಟಕಗಳನ್ನು ಅಳವಡಿಸಿ ಸಂದರ್ಭಾನುಸಾರವಾಗಿ ಮಾತನಾಡುವುದು. ಸ್ವಂತ ರಚನೆಗಳಲ್ಲಿ ಅವುಗಳನ್ನು ಸಂದರ್ಭಾನುಸಾರವಾಗಿ ಉಪಯೋಗಿಸುವುದು.
- ಜನಪದಗೀತೆ, ಕವಿತೆಗಳ ರಾಗ, ತಾಳ, ಭಾವ ಎಂಬಿವುಗಳನ್ನು ಆಸ್ವಾದಿಸುವುದು, ತಾಳದೊಂದಿಗೆ ಭಾವನಾತ್ಮಕವಾಗಿ ಹಾಡಿ ಮಂಡಿಸುವುದು. ಕಂಠಪಾಠ ಮಾಡುವುದು.
- ಸ್ವಂತ ಅಭಿರುಚಿಗೆ ತಕ್ಕಂತೆ ಕಥೆ, ಕವಿತೆ, ನಾಟಕ, ಪ್ರವಾಸಕಥನ ಮೊದಲಾದ ವಿಭಿನ್ನ ವಿಭಾಗಗಳಲ್ಲಿ ಒಳಗೊಂಡ ಪುಸ್ತಕಗಳನ್ನು ಗುರುತಿಸಿ ಓದುವುದು ಮತ್ತು ಓದಿ ತಿಳಿದ ವಿಚಾರಗಳನ್ನು ವಿವಿಧ ರೀತಿಯಲ್ಲಿ ಪ್ರಕಟಪಡಿಸುವುದು.
- ಪರಿಚಿತವಾದ ವಿಷಯಗಳನ್ನು ವಸ್ತುವಾಗಿರಿಸಿಕೊಂಡು ಕಥೆ, ಕವಿತೆ ಮೊದಲಾದ ಸೃಜನಾತ್ಮಕ ರಚನೆಗಳನ್ನು ಮಾಡುವುದು.
- ವಿಭಿನ್ನ ರೀತಿಯ ವ್ಯವಹಾರ ರೂಪಗಳನ್ನು ತಯಾರಿಸುವುದು. ಅವುಗಳನ್ನು ಸಂಚಿಕೆ, ಭಿತ್ತಿಪತ್ರಿಕೆ, ಹಸ್ತಪತ್ರಿಕೆ, ನಿಯತಕಾಲಿಕಗಳಲ್ಲಿ ಪ್ರಕಟಿಸುವುದು.
- ಸೃಜನಾತ್ಮಕ ರಚನೆಗಳನ್ನು ಓದಿ, ಅವುಗಳ ಪ್ರಧಾನ ಆಶಯ ಕೆಡದಂತೆ ಸಂಕ್ಷಿಪ್ತವಾಗಿ ಬರೆಯುವುದು.
- ಕಥೆ, ಕವಿತೆಗಳಲ್ಲಿ ಕಥಾಪಾತ್ರಗಳ ಮಾನಸಿಕ ಸ್ಥಿತಿ, ಅವುಗಳಿಗಿರುವ ಸ್ಥಾನ ಇತ್ಯಾದಿಗಳನ್ನು ಗುರುತಿಸಿ ಬಾಯ್ದೆರೆಯಾಗಿ ಮತ್ತು ಲಿಖಿತವಾಗಿ ಪಾತ್ರಚಿತ್ರಣ ಮಾಡುವುದು.
- ವಿವಿಧ ಕವಿತೆಗಳನ್ನು ಕಂಠಪಾಠ ಮಾಡಿ ಸೂಕ್ತವಾದ ರಾಗ, ತಾಳಗಳೊಂದಿಗೆ ಭಾವಪೂರ್ಣವಾಗಿ ಹಾಡುವುದು.
- ಸ್ವಂತ ಆಶಯಗಳನ್ನು ಶಿಷ್ಟಭಾಷೆಯಲ್ಲಿ ತಪ್ಪಿಲ್ಲದೆ ಬರೆಯುವುದು.
- ಸೃಜನಾತ್ಮಕ ರಚನೆಗಳ ಭಾವವನ್ನು ಅರ್ಥೈಸಿಕೊಂಡು ನಾಟಕ, ಭಾವಾಭಿನಯ ಮತ್ತು ಮೂಕಾಬಿನಯಗಳ ಮೂಲಕ ಮಂಡಿಸುವುದು.
- ಓದಿದ ವಿಚಾರಗಳನ್ನು ವಿಶ್ಲೇಷಿಸಿ ತನ್ನ ಅಭಿಪ್ರಾಯಗಳನ್ನು ಭಾಷಣ, ಪ್ರಬಂಧ ಮತ್ತು ಚರ್ಚೆಗಳ ಮೂಲಕ ಮಂಡಿಸುವುದು.
- ಪರಿಚಿತವಾದ ಕವಿತೆಗಳಲ್ಲಿರುವ ಬಿಂಬಕಲ್ಪನೆ, ವರ್ಣನೆ ಎಂಬಿವುಗಳನ್ನು ಗುರುತಿಸುವುದು ಮತ್ತು ವಾಚಿಕವಾಗಿ ಮಂಡಿಸುವುದು.
- ದೃಶ್ಯ–ಶ್ರಾವ್ಯ ಮಾಧ್ಯಮಗಳ ಮೂಲಕ ಗಳಿಸಿದ ವಿಚಾರಗಳನ್ನು ತನ್ನ ರಚನೆಯಲ್ಲಿ ಬಳಸುವುದು.

# ಅರ್ಥಕೋಶ

## ಅ

ಅಂಬರ – ಆಕಾಶ, ಬಟ್ಟೆ
ಅಂಬೋಣ – ಹೇಳಿಕೆ
ಅಂತಸ್ತು – ಮಹಡಿ, ಮಟ್ಟ
ಅಂತರ್ಧಾನ – ಮಾಯವಾಗುವಿಕೆ
ಅತಿಶಯೋಕ್ತಿ – ಸ್ವಲ್ಪವನ್ನು ಮಹತ್ತರವಾಗಿ ಮಾಡಿ ಹೇಳು
ಅತೀವ – ತುಂಬಾ, ಬಹಳ
ಅನ್ನಕ – ವರೆಗೆ, ತನಕ
ಅನುಮತಿ – ಒಪ್ಪಿಗೆ, ಪರವಾನಿಗೆ
ಅನಾಹುತ – ತೊಂದರೆ, ಕೇಡು
ಅರ್ಘ್ಯ – ದೇವತೆಗಳಿಗೂ, ಪೂಜ್ಯರಿಗೂ ಕೈ ತೊಳೆಯಲು ಕೊಡುವ ನೀರು.
ಅಲಗು – ಆಯುಧದ ಅಂಚು, ಖಡ್ಗ
ಅವಿಸ್ಮರಣೀಯ – ಸದಾ ಸ್ಮರಣೆಯಲ್ಲಿರುವ, ಮರೆಯಲಾಗದ
ಅಸಮರ್ಥ – ಸಾಮರ್ಥ್ಯವಿಲ್ಲದ, ಶಕ್ತವಲ್ಲದ
ಅಸಹನೆ – ತಡೆದುಕೊಳ್ಳದಿರುವಿಕೆ
ಅಳಿಸು – ನಾಶಮಾಡು, ಕಣ್ಣೀರು ಹಾಕಿಸು

## ಆ

ಆಗಸ – ಆಕಾಶ, ನಭ, ಗಗನ
ಆತಂಕ – ಹೆದರಿಕೆ, ಚಿಂತೆ
ಆತ್ಮವಿಶ್ವಾಸ – ತನಗೆ ತನ್ನಲ್ಲಿರುವ ನಂಬಿಕೆ
ಆಮಿಷ – ಆಸೆ, ಲಂಚ
ಆವರಿಸು – ವ್ಯಾಪಿಸು
ಆಸರೆ – ಆಶ್ರಯ

## ಇ

ಇಳೆ – ಭೂಮಿ, ತಿರೆ, ಧರಣಿ, ಬುವಿ

## ಉ

ಉಬ್ಬರ – ಹೆಚ್ಚುವಿಕೆ, ಆಧಿಕ್ಯ

## ಒ

| | | |
|---|---|---|
| ಒದರು | – | ಕಿರುಚು |
| ಒಕ್ಕಲು | – | ಕುಟುಂಬ, ನಿವಾಸ |
| ಒಲುಮೆ | – | ಪ್ರೀತಿ, ಮೆಚ್ಚುಗೆ |

## ಓ

| | | |
|---|---|---|
| ಓರಗೆ | – | ಸಮವಯಸ್ಸು, ಸಮಾನತೆ |

## ಕ

| | | |
|---|---|---|
| ಕಳಪೆ | – | ಕಡಿಮೆ ಗುಣಮಟ್ಟ |
| ಕಣ್ಮರೆಯಾಗು | – | ಕಣ್ಣಿಗೆ ಕಾಣದಾಗು, ಸತ್ತುಹೋಗು |
| ಕಾಡತೂಸು | – | ಕೋವಿ, ಬಂದೂಕು |
| ಕಾರ್ಮೋಡ | – | ಕಪ್ಪಾದ ಮೋಡ |
| ಕಾಯಕ | – | ಕೆಲಸ, ದುಡಿಮೆ |
| ಕೀಳರಿಮೆ | – | ತಾನು ಕಡಿಮೆ ಎಂದು ಭಾವಿಸುವುದು. |
| ಕುರುಹು | – | ಗುರುತು |
| ಕುರುಳು | – | ಬೆರಣಿ, ಕೂದಲು |
| ಕೆಚ್ಚು | – | ಧೈರ್ಯ, ಸಾಹಸ |
| ಕೋಡು | – | ಕೊಂಬು |
| ಕೋರಿಕೆ | – | ಬಯಕೆ, ಇಚ್ಛೆ |
| ಕ್ರೋಢೀಕರಣ | – | ಒಟ್ಟು ಸೇರಿಸು |

## ಗ

| | | |
|---|---|---|
| ಗರಬಡಿ | – | ಏನು ಮಾಡಬೇಕೆಂದು ತಿಳಿಯದಾಗು |
| ಗುಂಪ | – | ಆಳ |
| ಗುಂಪು | – | ಸಮೂಹ |
| ಗಿಟ್ಟಿಸು | – | ಹೇಗಾದರೂ ಪಡಕೊಳ್ಳು, ಸಂಪಾದಿಸು |
| ಗೋಚರಿಸು | – | ಕಾಣು, ವೇದ್ಯವಾಗು |

## ಚ

| | | |
|---|---|---|
| ಚತುರೆ | – | ಜಾಣೆ, ನಿಪುಣೆ |
| ಚಾಣಾಕ್ಷ | – | ಸೂಕ್ಷ್ಮ ದೃಷ್ಟಿಯುಳ್ಳವನು, ವ್ಯವಹಾರ ಚತುರ |
| ಚಾತುರ್ಯ | – | ಜಾಣತನ |

ಚಾರಣಿಗ – ತಿರುಗಾಡುವವ
ಚಿಗರೆ – ಹುಲ್ಲೆ, ಜಿಂಕೆ
ಚೇತರಿಸು – ಚೈತನ್ಯವನ್ನು ಪಡೆ, ಜಾಗೃತವಾಗು

## ಜ

ಜಡಿಮಳೆ – ಒಂದೇ ಸಮನೆ ಸುರಿಯುವ ಮಳೆ
ಜಲಚರ – ನೀರಿನಲ್ಲಿ ವಾಸಿಸುವವುಗಳು
ಜಿಪುಣ – ಲೋಭಿ, ಧಾರಾಳ ಖರ್ಚು ಮಾಡದವ

## ಟ

ಟ್ರೈಸಿಕಲ್ – ಮೂರು ಚಕ್ರದ ಸೈಕಲು

## ತ

ತಟಾಕ – ಕೆರೆ, ಜಲಾಶಯ
ತಡಿ – ತೀರ, ದಡ
ತರು – ಮರ, ವೃಕ್ಷ
ತಾಣ – ಸ್ಥಳ, ನೆಲೆ
ತೀರ್ಥಾಟಕರು – ಪುಣ್ಯಕ್ಷೇತ್ರಗಳನ್ನು ಸಂದರ್ಶಿಸುವವರು
ತುಂಟಾಟ – ಹುಡುಗಾಟ
ತೆಪ್ಪ – ಹರಿಗೋಲು, ನಾವೆ
ತೆವಳು – ಕುಳಿತು ಮುಂದಕ್ಕೆ ಸಾಗು
ತೇರು – ರಥ, ಸಫಲವಾಗು
ತೊರೆ – ಹೊಳೆ, ಹಳ್ಳ, ಝರಿ, ಸಣ್ಣ ಪ್ರವಾಹ
ತೋಪು – ತೋಟ
ತೋರು – ಕಾಣು, ಅನಿಸು
ತ್ಯಾಗ – ಅಗಲುವಿಕೆ, ಕೊಡುವಿಕೆ, ದಾನ ಮಾಡುವಿಕೆ

## ದ

ದಂಗಾಗು – ದಿಕ್ಕೆಡು, ಕಂಗಾಲಾಗು
ದಿಗ್ಭ್ರಾಂತ – ದಿಕ್ಕು ತಪ್ಪು
ದುರ್ವಾಸನೆ – ಕೆಟ್ಟ ವಾಸನೆ
ದುರಂತ – ದುಃಖದಲ್ಲಿ ಕೊನೆಗೊಳ್ಳುವ
ದೈತ್ಯ – ರಾಕ್ಷಸ, ದೊಡ್ಡ

| | | |
|---|---|---|
| ಧಾಮ | – | ಮನೆ |
| ಧುಮ್ಮಿಕ್ಕು | – | ಕೆಳಗೆ ಹಾರು, ನೆಗೆಯು |
| ಧೃತಿ | – | ಧೈರ್ಯ |

## ನ

| | | |
|---|---|---|
| ನಯನ | – | ಕಣ್ಣು, ಅಕ್ಷಿ, ನೇತ್ರ |
| ನಾವೆ | – | ದೋಣಿ |
| ನಿಪುಣ | – | ಜಾಣ |
| ನಿಬ್ಬೆರಗು | – | ಅತ್ಯಾಶ್ಚರ್ಯ, ಸೋಜಿಗ |
| ನಿರ್ಬಂಧಿಸು | – | ತಡೆಮಾಡು, ಅಡ್ಡಿಮಾಡು |
| ನಿರಕ್ಷರ ಕುಕ್ಷಿ | – | ಓದು ಬರಹ ಬಾರದವ |
| ನಿರಾಕರಿಸು | – | ಅಲ್ಲಗಳೆ, ಒಪ್ಪದಿರು |
| ನಿಲುಕು | – | ದೊರೆಯು, ಎಟುಕು |
| ನಿವಾರಿಸು | – | ತೆಗೆದುಹಾಕು, ಕಳೆ |
| ನಿಶ್ಶಸ್ತ್ರ | – | ಆಯುಧಗಳಿಲ್ಲದ |
| ನೆಮ್ಮದಿ | – | ಸಮಾಧಾನ, ಶಾಂತಿ |
| ನೆಳಲು | – | ನೆರಳು, ಸ್ಮರಣೆ |
| ನೇಸರು | – | ಸೂರ್ಯ, ಭಾಸ್ಕರ |
| ನೊರಜು | – | ನುಸಿ, ಒಂದು ಬಗೆಯ ಕಲ್ಲು |
| ನೊಸಲು | – | ಹಣೆ |

## ಪ

| | | |
|---|---|---|
| ಪರಂಪರೆ | – | ಕುಲ, ವಂಶ, ಸಂಪ್ರದಾಯ |
| ಪಾರಂಗತ | – | ಚೆನ್ನಾಗಿ ಅರಿತವನು, ನಿಪುಣ |
| ಪೊರೆಯು | – | ಕಾಪಾಡು, ರಕ್ಷಿಸು |
| ಪ್ರಜ್ವಲಿಸು | – | ಪ್ರಕಾಶಿಸು, ಚೆನ್ನಾಗಿ ಉರಿ |
| ಪ್ರತಿಭೆ | – | ವಿಶೇಷ ಪ್ರಜ್ಞೆ, ಹೊಸ ಹೊಸ ಕಲ್ಪನೆಗಳನ್ನು ಕಂಡುಕೊಳ್ಳುವ ಚತುರಮತಿ. |
| ಪ್ರಭೇದ | – | ವಿಭಾಗ, ಪ್ರಕಾರ, ವ್ಯತ್ಯಾಸ |
| ಪ್ರಾತಃಕಾಲ | – | ಬೆಳಗ್ಗಿನ ಸಮಯ, ಮುಂಜಾನೆ |
| ಪ್ರಾಪ್ತಿ | – | ಹೊಂದುವಿಕೆ, ಗಳಿಕೆ, ಲಾಭ, ಆದಾಯ |

## ಬ

| | | |
|---|---|---|
| ಬಡಾಯಿ | – | ಜಂಭಕೊಚ್ಚಿಕೊಳ್ಳುವಿಕೆ, ಹರಟೆಹೊಡೆಯುವಿಕೆ |

ಬೃಹದಾಕಾರ – ದೊಡ್ಡದಾದ ಆಕಾರ
ಬೊಗಸೆ – ಗುಳಿಯಾಗುವಂತೆ ಜೋಡಿಸಿದ ಎರಡು ಅಂಗೈಗಳು
ಭಾಸವಾಗು – ತೋರು, ಕಾಣು
ಭಿತ್ತಿ – ಗೋಡೆ, ತುಂಡು, ಒಡೆಯುವಿಕೆ
ಭಿನ್ನತೆ – ವ್ಯತ್ಯಸ್ತವಾಗಿರುವಿಕೆ
ಭೇರಿ – ಒಂದು ಬಗೆಯ ಚರ್ಮವಾದ್ಯ

## ಮ

ಮನ್ನಿಸು – ಕ್ಷಮಿಸು
ಮರುಳು – ಹುಚ್ಚು, ದಡ್ಡತನ
ಮುಂಜಾವ – ಬೆಳಗ್ಗಿನ ಹೊತ್ತು, ಪ್ರಾತಃಕಾಲ
ಮುಂದಾಳು – ನಾಯಕ, ನೇತಾರ
ಮುಗ್ಗರಿಸು – ಎಡವು
ಮೋಕ್ಷ – ಬಿಡುಗಡೆ, ಮುಕ್ತಿ
ಮೈನವಿರೇಳು – ರೋಮಾಂಚನವಾಗು

## ರ

ರಮಣೀಯ – ಸುಂದರವಾದ, ಚೆಲುವಾದ

## ಲ

ಲೋಕಕಲ್ಯಾಣ – ಜನರಿಗೆ ಒಳ್ಳೆಯದನ್ನು ಮಾಡುವುದು

## ವ

ವಾತ್ಸಲ್ಯ – ಹಿರಿಯರಿಗೆ ಕಿರಿಯರೊಂದಿಗಿರುವ ಪ್ರೀತಿ, ಮಮತೆ
ವಾಸ್ತವ್ಯ – ತಂಗುವಿಕೆ, ವಾಸ
ವಾಸಿ – ಕ್ಷೇಮ, ಗುಣ, ಒಳಿತು
ವಿಚಲಿತ – ಚಂಚಲವಾದ, ಅಲುಗಾಡುವ
ವಿಪತ್ತು – ಕೇಡು, ಆಪತ್ತು
ವಿವಿಧತೆ – ಬಹುಬಗೆಯಾಗಿರುವಿಕೆ, ವೈವಿಧ್ಯ
ವಿವೇಕ – ಬುದ್ಧಿ, ತಿಳುವಳಿಕೆ
ವಿರಮಿಸು – ವಿಶ್ರಾಂತಿ ಹೊಂದು
ವೈಕಲ್ಯ – ನ್ಯೂನತೆ, ಕೊರತೆ
ವ್ರತ – ನಿಯಮ, ಶಾಸನ, ಪ್ರತಿಜ್ಞೆ, ಪೂಜೆ, ನಿಯಮನಿಷ್ಠೆ

## ಶ

ಶರಧಿ – ಸಮುದ್ರ, ಕಡಲು, ಬತ್ತಳಿಕೆ
ಶೇಖರಿಸು – ಸಂಗ್ರಹಿಸು

## ಸ

ಸಂಕಟ – ದುಃಖ, ಕಷ್ಟ, ನೋವು
ಸಂಕುಲ – ಗುಂಪು, ಸಮೂಹ, ಒಟ್ಟುಗೂಡಿದ
ಸಂಕೋಚ – ಕುಗ್ಗುವಿಕೆ, ಮುದುಡಿಕೊಳ್ಳುವಿಕೆ
ಸಂತೈಸು – ಸಮಾಧಾನಪಡಿಸು
ಸಂಯಮ – ತಾಳ್ಮೆ, ಸಹನೆ
ಸಂಪದ್ಭರಿತ – ಸಂಪತ್ತಿನಿಂದ ಕೂಡಿಕೊಂಡ
ಸಫಲ – ಸಾರ್ಥಕವಾದ, ಫಲಹೊಂದಿದ
ಸಬೂಬು – ಕಾರಣ
ಸಮಷ್ಟಿ – ಒಟ್ಟು, ಪೂರ್ಣ
ಸಮಾರಾಧನೆ – ಅನ್ನ ಸಂತರ್ಪಣೆ, ತೃಪ್ತಿಪಡಿಸುವಿಕೆ
ಸವಾಲು – ಪಂಥ
ಸಲಹೆ – ಸೂಚನೆ
ಸೆಣಸು – ಹೋರಾಡು, ಸಿಟ್ಟಾಗು, ಮತ್ಸರ
ಸ್ಮರಣೆ – ನೆನಪು, ಜ್ಞಾಪಕ
ಸ್ಮಾರಕ – ಒಂದು ಮಹತ್ವದ ಘಟನೆ ಅಥವಾ ವ್ಯಕ್ತಿಯ ಜ್ಞಾಪಕಾರ್ಥ ಸ್ಥಾಪಿಸಿದ ರಚನೆಗಳು

## ಹ

ಹರಿಗೋಲು – ತೆಪ್ಪ, ನದಿಯನ್ನು ದಾಟಲು ಉಪಯೋಗಿಸುವ ಸಾಧನ
ಹಸು – ಗೋವು, ಆಕಳು, ಪಶು, ತುರು
ಹಿರಿಮೆ – ಶ್ರೇಷ್ಠತೆ
ಹೆತ್ತರೆ – ಹೆಪ್ಪು ಹಾಕಿದರೆ
ಹೆದ್ದೆರೆ – ಹಿರಿದಾದ ತೆರೆಗಳು
ಹೇರು – ಭಾರ, ಹೊರೆ
ಹೊನ್ನಾವರಿಕೆ – ಒಂದು ಬಗೆಯ ಹುಲ್ಲು

* * *